ಲಿಖಿತ ಮೂಲಕ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

**ಪಟ್ಟಿ – ೦೧**

**ಒಟ್ಟು ಪ್ರಶ್ನೆಗಳು – ೧೨೧**

# ಕರ್ನಾಟಕ ವಿಧಾನ ಪರಿಷತ್ತು

ನೂರ ಇಪ್ಪತ್ತಾರನೇ ಅಧಿವೇಶನ

**ಮಂಗಳವಾರ, ದಿನಾಂಕ : ೦೯ನೇ ಡಿಸೆಂಬರ್, ೨೦೧೪**

---

## ಸಮೂಹ – II

೧. ಇಂಧನ ಸಚಿವರು

೨. ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು

೩. ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು

೪. ಲೋಕೋಪಯೋಗಿ ಸಚಿವರು

೫. ಸಹಕಾರ ಮತ್ತು ಸಕ್ಕರೆ ಸಚಿವರು

೬. ಕೃಷಿ ರಾಜ್ಯ ಸಚಿವರು

---

## ಲೋಕೋಪಯೋಗಿ ರಸ್ತೆ ಮಾರ್ಜಿನುಗಳು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೧ (೨) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಲೋಕೋಪಯೋಗಿ ಇಲಾಖೆಯ ರಸ್ತೆಗಳ ಅಂಚು (Road Margin) ಪಟ್ಟಾ ಸ್ಥಳದಲ್ಲಿ ಬಂದಾಗ ಅದಕ್ಕೆ ಪರಿಹಾರ ನೀಡುವ ಯೋಜನೆ ಸರ್ಕಾರದ ಮುಂದಿದೆಯೇ ; ಇಲ್ಲವಾದಲ್ಲಿ ಕಾರಣವೇನು ;

(ಆ) ಪಟ್ಟಾ ಸ್ಥಳದಲ್ಲಿ ಬರುವ ರಸ್ತೆ ಮಾರ್ಜಿನುಗಳಿಗೆ ಪಟ್ಟಾದಾರರ ಮೇಲೆ ನಿಯಂತ್ರಣ ಹೇರುವ ಇಲಾಖೆ ಪರಿಹಾರ ನೀಡದೇ ಇರುವುದು ನ್ಯಾಯಸಮ್ಮತವೇ ?

## ರೈತರಿಂದ ಸೌರ ವಿದ್ಯುತ್ ಉತ್ಪಾದನೆ

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೨ (೩) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಸೌರ ವಿದ್ಯುತ್ ಉತ್ಪಾದಿಸಲು ಅರ್ಜಿ ಸಲ್ಲಿಸುವ ರೈತರಿಗೆ ಇನ್ನೂ ಹೆಚ್ಚಿನ ಅವಕಾಶ ಕಲ್ಪಿಸಲಾಗುವುದೇ ; ಕಲ್ಪಿಸಿದ್ದಲ್ಲಿ ಅರ್ಜಿ ಸಲ್ಲಿಸಲು ಇರುವ ಮಾನದಂಡವೇನು ;

(ಆ) ಕಾಡು ಪ್ರಾಣಿಗಳ ಹಾವಳಿ ಕಾರಣದಿಂದಾಗಿ ಕೃಷಿ ಮಾಡಲಾಗದ ಭೂಮಿಗಳಲ್ಲಿ ಸೌರ ವಿದ್ಯುತ್ ಉತ್ಪಾದನಾ ಘಟಕಗಳನ್ನು ನಿರ್ಮಿಸಲು ಹಂತ ಹಂತವಾಗಿ ಅವಕಾಶ ಕಲ್ಪಿಸಲಾಗುವುದೇ ?



## ಭತ್ತಕ್ಕೆ ಬೆಂಬಲ ಬೆಲೆ ಘೋಷಣೆ

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೩ (೧) ಮಾನ್ಯ ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಪ್ರತಿ ಕ್ವಿಂಟಾಲ್ ಭತ್ತಕ್ಕೆ ಇರುವ ಮಾರುಕಟ್ಟೆ ಬೆಲೆಯೆಷ್ಟು (ಜಿಲ್ಲಾವಾರು ವಿವರ ನೀಡುವುದು) ;

(ಆ) ಪ್ರಸಕ್ತ ಸಾಲಿನಲ್ಲಿ ರೈತರಿಂದ ಮಾರಲ್ಪಟ್ಟ ಭತ್ತದ ಪ್ರಮಾಣವೆಷ್ಟು ; ಮತ್ತು ಮಾರಾಟ ಮಾಡಲು ಬಾಕಿ ಇರುವ ಭತ್ತದ ಪ್ರಮಾಣವೆಷ್ಟು (ಜಿಲ್ಲಾವಾರು ವಿವರ ನೀಡುವುದು) ;

(ಇ) ರೈತರು ಕಡಿಮೆ ಬೆಲೆಯಲ್ಲಿ ಭತ್ತವನ್ನು ಮಾರಾಟ ಮಾಡುತ್ತಿದ್ದರೂ ಸರ್ಕಾರ ಇಲ್ಲಿಯವರೆಗೂ ಭತ್ತಕ್ಕೆ ಬೆಂಬಲ ಬೆಲೆಯನ್ನು ಘೋಷಿಸದಿರಲು ಕಾರಣವೇನು, ಮತ್ತು ಯಾವಾಗ ಘೋಷಿಸಲಾಗುವುದು ?

## ರೈತರಿಗೆ ಬಾಕಿ ಮೊತ್ತ ಪಾವತಿಸುವಲ್ಲಿ ಭ್ರಷ್ಟಾಚಾರ

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೪ (೦೫) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಸಕ್ಕರೆ ಕಾರ್ಖಾನೆಯು ಕಾರ್ಮಿಕರಿಗೆ ಬಾಕಿ ಇರುವ ಮೊತ್ತಕ್ಕೆ ಬಡ್ಡಿ ಸಹಿತ ಪಾವತಿಸಿ

ರೈತರ ಬಾಕಿ ಇರುವ ಮೊತ್ತಕ್ಕೆ ಬಡ್ಡಿ ರಹಿತ ನೀಡಿರಲು ಕಾರಣವೇನು ; ಈ ತಾರತಮ್ಮ ಹೋಗಲಾಡಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ; ಇಲ್ಲವಾದಲ್ಲಿ ಕಾರಣವೇನು ;

(ಆ) ಸದರಿ ಸಕ್ಕರೆ ಕಾರ್ಖಾನೆಯು ರೈತರು, ಕಾರ್ಮಿಕರು ಹಾಗೂ ಸಹಕಾರಿ ಸಂಘಗಳಿಗೆ ಬಾಕಿ ಇರುವ ಹಣ ಪಾವತಿಸಲು ಸರ್ಕಾರ ಬಿಡುಗಡೆ ಮಾಡಿದ ಸುಮಾರು ೧೨ ಕೋಟಿ ಮೊತ್ತವನ್ನು ಪಾವತಿ ಮಾಡಿದ ಸಕ್ಕರೆ ಕಾರ್ಖಾನೆ ಎಂ.ಡಿ./ಸಹಕಾರಿ ಜಿಲ್ಲಾ ನೋಂದಣಾಧಿಕಾರಿ (ಡಿ.ಆರ್) ರವರು ಹಣ ಪಾವತಿಸುವಲ್ಲಿ ಭ್ರಷ್ಟಾಚಾರ ನಡೆಸಿರುವ ಬಗ್ಗೆ ಉಡುಪಿ ಜಿಲ್ಲಾ ಕೆ.ಡಿ.ಪಿ. ಸಭೆಯಲ್ಲಿ ತನಿಖೆ ಮಾಡಲು ಸರ್ಕಾರವನ್ನು ಕೋರುವುದೆಂದು ನಿರ್ಣಯಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು ?

## ನಿಯಮ ಮೀರಿ ಅಡುಗೆ ಅನಿಲ ಸಿಲಿಂಡರ್ ಗೋದಾಮು ನಿರ್ಮಾಣ

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೫ (೦೪) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಉಡುಪಿ ಜಿಲ್ಲೆಯ ಸಾಲಿಗ್ರಾಮ ಪಟ್ಟಣ ಪಂಚಾಯತಿ ವ್ಯಾಪ್ತಿಯ ಜನವಸತಿ ಪ್ರದೇಶದಲ್ಲಿ ಅಡುಗೆ ಅನಿಲ ಸಿಲಿಂಡರ್ ಸಂಗ್ರಹಣಾ ಗೋದಾಮು ನಿರ್ಮಿಸಲು ಅನುಮತಿ ಕೋರಿ ಅರ್ಜಿ ಬಂದಿರುವುದು ನಿಜವೇ ; ಬಂದಿದ್ದಲ್ಲಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ;



(ಆ) ಜನವಸತಿ ಪ್ರದೇಶದಲ್ಲಿ ಅಡುಗೆ ಅನಿಲ ಸಿಲಿಂಡರ್ ಸಂಗ್ರಹಣಾ ಗೋದಾಮುಗಳನ್ನು ನಿರ್ಮಿಸುವಾಗ ಅನುಸರಿಸಬೇಕಾದ ಮಾನದಂಡಗಳೇನು ಮತ್ತು ಇಂತಹ ಗೋದಾಮು ನಿರ್ಮಿಸುವಾಗ ಈ ಮಾನದಂಡಗಳನ್ನು ಅನುಸರಿಸಲಾಗಿದೆಯೇ ;

(ಇ) ಸದರಿ ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ಜನವಸತಿ ಪ್ರದೇಶದಲ್ಲಿ ಅಡುಗೆ ಅನಿಲ ಸಿಲಿಂಡರ್ ಸಂಗ್ರಹಣಾ ಗೋದಾಮು ನಿರ್ಮಿಸಲು ವಿವಿಧ ಇಲಾಖೆಗಳು ನಿರಾಕ್ಷೇಪಣಾ ಮಾರ್ಗಸೂಚಿಯನ್ನು ಮೀರಿ ನಿರಾಕ್ಷೇಪಣಾ ಪತ್ರವನ್ನು ನೀಡಿರುವುದು ನಿಜವೇ ; ನಿಜವಾಗಿದ್ದಲ್ಲಿ ಮಾರ್ಗಸೂಚಿ ಮೀರಿ ಪತ್ರ ನೀಡಿದ ಅಧಿಕಾರಿಗಳ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ ?

## ಖಾಸಗಿ ಕಂಪನಿಗಳಿಂದ ರೈತರಿಗೆ ಕಳಪೆ ಬೀಜ ಸರಬರಾಜು

**ಶ್ರೀ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೬ (೮) ಮಾನ್ಯ ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಖಾಸಗಿ ಕಂಪನಿಗಳು ಕಳಪೆ ಬೀಜ ಸರಬರಾಜು ಮಾಡಿ ರೈತರಿಗೆ ಅಪಾರ ನಷ್ಟ ಉಂಟು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಈ ಕಂಪನಿಗಳ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮವೇನು ;

(ಇ) ಈ ಹಾನಿಗೊಳಗಾದ ರೈತರಿಗೆ ಸರ್ಕಾರದಿಂದ ಪರಿಹಾರ ಒದಗಿಸಲಾಗಿದೆಯೇ ; ಒದಗಿಸಿದ್ದಲ್ಲಿ ಜಿಲ್ಲಾವಾರು ಮಾಹಿತಿ ನೀಡುವುದು ;

(ಈ) ಕೃಷಿ ಇಲಾಖೆಯ ಬೀಜ ನಿಗಮ ಸಂಸ್ಥೆಯಿಂದ ಉತ್ತಮ ಬೀಜಗಳನ್ನು ರೈತರಿಗೆ ಬೇಕಾಗುವ ಪ್ರಮಾಣದಲ್ಲಿ ಒದಗಿಸಲು ಸರ್ಕಾರ ಯೋಚಿಸಿದೆಯೇ ?

## ರೈತರಿಗೆ ಯಾಂತ್ರಿಕ ಸಾಮಗ್ರಿಗಳ ಸಹಾಯ ಧನ ಬಿಡುಗಡೆ

**ಶ್ರೀ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೭ (೯) ಮಾನ್ಯ ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರೈತರಿಗೆ ನೀಡಲಾಗುತ್ತಿರುವ ಕೃಷಿ ಚಟುವಟಿಕೆ ಯಾಂತ್ರಿಕ ಸಾಮಗ್ರಿಗಳ ಖರೀದಿಗೆ ಸಹಾಯ ಧನ ಬಾಕಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಈ ಬಾಕಿ ಇರುವ ಸಹಾಯ ಧನದ ವಿವರ ಜಿಲ್ಲಾವಾರು ನೀಡುವುದು ;

(ಇ) ಈ ಹಣವನ್ನು ಯಾವಾಗ ಬಿಡುಗಡೆ ಮಾಡಲಾಗುವುದು ?

## ಬಾಳೆ ಬೆಳೆಗೆ ಬಂದಿರುವ ಕೀಟ ಬಾಧೆ

**ಶ್ರೀ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೮ (೧೦) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು–ಸುಳ್ಯ ತಾಲ್ಲೂಕಿನಲ್ಲಿ ಪ್ರಮುಖವಾಗಿ ಬೆಳೆಯುವ ಬಾಳೆ ಬೆಳೆಯು, ಎಲೆ ತಿನ್ನುವ ಕೀಟ ಬಾದೆಯಿಂದ ತೊಂದರೆಗೊಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಈ ಕೀಟ ಬಾದೆಯನ್ನು ನಿಯಂತ್ರಣಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ?



## ಟಿಬೆಟಿಯನ್ ಕಾಲೋನಿಯ ಟ್ರಾನ್ಸ್‌ಫಾರ್ಮರ್‌ಗಳು

**ಶ್ರೀ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೯ (೭) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡಿನಲ್ಲಿರುವ ಟಿಬೆಟಿಯನ್ ಕಾಲೋನಿಗಳಲ್ಲಿ ಇರುವ ಟ್ರಾನ್ಸ್‌ಫಾರ್ಮರ್‌ಗಳು ಸುಟ್ಟು ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಅಲ್ಲಿನ ಸಾರ್ವಜನಿಕರ ತೊಂದರೆಯನ್ನು ನಿವಾರಿಸಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು ;

(ಇ) ಸದರಿ ಟ್ರಾನ್ಸ್‌ಫಾರ್ಮರ್‌ಗಳನ್ನು ಯಾವ ಕಾಲಮಿತಿಯಲ್ಲಿ ದುರಸ್ತಿಗೊಳಿಸಲಾಗುವುದು ?

## ಕುಸುಬೆ ಬೆಳೆಯ ಪುನಶ್ಚೇತನ

**ಶ್ರೀ ಅರುಣ ಶಹಾಪೂರ (ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು) :–**

೧೦ (೬೬) ಮಾನ್ಯ ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಕುಸುಬೆ ಬೆಳೆಯನ್ನು ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟು ವಿಸ್ತೀರ್ಣದಲ್ಲಿ ಬೆಳೆಯಲಾಗುತ್ತಿದೆ (ಕಳೆದ ೦೨ ವರ್ಷದ ಮಾಹಿತಿ ನೀಡುವುದು) ;

(ಆ) ಈ ಬೆಳೆಯ ಪುನಶ್ಚೇತನಕ್ಕೆ ಸರ್ಕಾರ ತೆಗೆದುಕೊಳ್ಳುತ್ತಿರುವ ಕ್ರಮಗಳೇನು ?

## ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕುಡಿಯುವ ನೀರು ಸರಬರಾಜು

**ಶ್ರೀ ಅರುಣ ಶಹಾಪೂರ (ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು) :–**

೧೧ (೬೭) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಿಜಾಪೂರ, ಬಾಗಲಕೋಟೆ ಮತ್ತು ಬೆಳಗಾವಿ ಜಿಲ್ಲೆಗಳ ಯಾವ ಯಾವ ನಗರ ಸಭೆ, ಪುರಸಭೆ, ಪಟ್ಟಣ ಪಂಚಾಯ್ತಿ ವ್ಯಾಪ್ತಿಯಲ್ಲಿ ಎಷ್ಟು ದಿನಗಳಿಗೊಮ್ಮೆ ಕುಡಿಯುವ ನೀರನ್ನು ಒದಗಿಸಲಾಗುತ್ತಿದೆ ;

(ಆ) ಯಾವ ಯಾವ ನಗರ ಸಭೆ, ಪುರಸಭೆ, ಪಟ್ಟಣ ಪಂಚಾಯ್ತಿಗಳಲ್ಲಿ ರಸ್ತೆ ವಿಭಜಕಗಳನ್ನು ಎಷ್ಟು ಕಿ.ಮೀ. ವ್ಯಾಪ್ತಿಗೆ ನಿರ್ಮಿಸಲಾಗಿದೆ ;

(ಇ) ರಸ್ತೆ ವಿಭಜಕ ನಿರ್ಮಿಸಲು ಇರುವ ಮಾನ ದಂಡಗಳೇನು ;

## ಕಬ್ಬಿಗೆ ನಿಗದಿಪಡಿಸಿದ ದರ

**ಶ್ರೀ ಅರುಣ ಶಹಾಪೂರ (ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು) :–**

೧೨ (೬೩) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಹಂಗಾಮಿನಲ್ಲಿ ಕಬ್ಬಿಗೆ ಸರ್ಕಾರ ನಿಗದಿ ಪಡಿಸಿದ ದರವನ್ನು ಕಾರ್ಖಾನೆಗಳು ರೈತರಿಗೆ ನೀಡಿವೆಯೇ ;

(ಆ) ಯಾವ ಯಾವ ಕಾರ್ಖಾನೆಗಳು ನೀಡಿವೆ ಹಾಗೂ ಯಾವ ಯಾವ ಕಾರ್ಖಾನೆಗಳು ನೀಡಿಲ್ಲ ;

(ಇ) ಈ ನಿಟ್ಟಿನಲ್ಲಿ ಸರ್ಕಾರದ ಮುಂದಿನ ಕ್ರಮವೇನು ;

(ಈ) ಈ ಹಂಗಾಮಿನಲ್ಲಿ ಸರ್ಕಾರ ನಿಗದಿಪಡಿಸಿರುವ ಬೆಲೆಯೇನು ;

(ಉ) ಕಾರ್ಖಾನೆಗಳು ಕಬ್ಬನ್ನು ನುರಿಸಲು ನಿರಾಕರಿಸುತ್ತಿರುವುದು ನಿಜವೇ ?



## ರಾಜ್ಯ ಹೆದ್ದಾರಿಯಾಗಿ ಪರಿವರ್ತನೆ

**ಶ್ರೀ ಅರುಣ ಶಹಾಪೂರ (ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು) :–**

೧೩ (೬೪) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಾಗಲಕೋಟೆ ಜಿಲ್ಲೆಯ ಮಹಾಲಿಂಗಪುರ, ಯಾದವಾಡ ಮತ್ತು ಯರಗಟ್ಟಿ ಮಧ್ಯ ಇರುವ ರಸ್ತೆಯನ್ನು ರಾಜ್ಯ ಹೆದ್ದಾರಿಯನ್ನಾಗಿ ಪರಿವರ್ತಿಸಬೇಕೆಂಬ ಬೇಡಿಕೆಗೆ ಸರ್ಕಾರದ ನಿಲುವೇನು ;

(ಆ) ಈ ರಸ್ತೆಯನ್ನು ನಿರ್ಮಿಸಿದರೆ ಅದಕ್ಕೆ ತಗಲಬಹುದಾದ ಅಂದಾಜು ವೆಚ್ಚ ಎಷ್ಟು ?

## ಕೂಡಗಿ ಸೂಪರ್ ಥರ್ಮಲ್ ವಿದ್ಯುತ್ ಯೋಜನೆ

**ಶ್ರೀ ಅರುಣ ಶಹಾಪೂರ (ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು) :–**

೧೪ (೬೫) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಿಜಾಪೂರ ಜಿಲ್ಲೆಯ ಕೂಡಗಿ ಸೂಪರ್ ಥರ್ಮಲ್ (Super Thermal) ವಿದ್ಯುತ್ ಯೋಜನೆ ಈಗ ಯಾವ ಹಂತದಲ್ಲಿದೆ ;

(ಆ) ಇದರಲ್ಲಿ ಯಾವಾಗ ವಿದ್ಯುತ್ ಉತ್ಪಾದನೆ ಆರಂಭವಾಗುವುದು ;

(ಇ) ಈ ಯೋಜನೆಗೆ ಎಷ್ಟು ಟಿ.ಎಂ.ಸಿ. ನೀರನ್ನು ಆಲಮಟ್ಟಿ ಜಲಾಶಯದಿಂದ ಬಳಸಿಕೊಳ್ಳಲಾಗುವುದು ;

(ಈ) ಈ ಯೋಜನೆ ಕುರಿತು ಆ ವಿಭಾಗದ ಪರಿಸರವಾದಿಗಳು ಹಾಗೂ ರೈತರ ಆತಂಕ ನಿವಾರಣೆಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

## ಸಕ್ಕರೆ ಕಾರ್ಖಾನೆಗಳಿಂದ ಕಬ್ಬು ಬೆಳೆಗಾರರಿಗೆ ಬರಬೇಕಾದ ಬಾಕಿ

**ಶ್ರೀ ರಾಮಚಂದ್ರ ಗೌಡ (ಪದವೀಧರರ ಕ್ಷೇತ್ರ) :–**

೧೫ (೯೮) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಈವರೆಗೆ ಸಕ್ಕರೆ ಕಾರ್ಖಾನೆಗಳಿಂದ ರಾಜ್ಯದ ಕಬ್ಬು ಸರಬರಾಜು ಮಾಡಿದ ರೈತರಿಗೆ ಬರಬೇಕಾದ ಬಾಕಿ ಎಷ್ಟು ;

(ಆ) ಯಾವ ಯಾವ ಸಕ್ಕರೆ ಕಾರ್ಖಾನೆಗಳಿಂದ ಎಷ್ಟು ವರ್ಷದಿಂದ, ಯಾವ ದರದಲ್ಲಿ, ಎಷ್ಟು ಬಾಕಿ ಹಣ ಬರಬೇಕಿದೆ ;

(ಇ) ಸದರಿ ಬಾಕಿಯ ಪಾವತಿಗೆ ಸರ್ಕಾರ ಯಾವ ರೀತಿಯ ಕ್ರಮ ಕೈಗೊಳ್ಳುತ್ತಿದೆ ;

(ಈ) ಈ ಬಾರಿ ಕಬ್ಬಿನ ದರ ವಿಧಿಸಲು ಸರ್ಕಾರ ಯಾವ ರೀತಿಯ ಕ್ರಮ ಅನುಸರಿಸುತ್ತಿದೆ ?

## ಕಳಪೆ ಬಿತ್ತನೆ ಬೀಜದಿಂದಾಗಿ ರೈತರಿಗೆ ಆಗಿರುವ ನಷ್ಟ

**ಶ್ರೀ ರಾಮಚಂದ್ರ ಗೌಡ (ಪದವೀಧರರ ಕ್ಷೇತ್ರ) :–**

೧೬ (೯೭) ಮಾನ್ಯ ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೧೨ ರಿಂದ ಇಲ್ಲಿಯುವರೆಗೆ ಕಳಪೆ ಬೀಜದಿಂದಾಗಿ ಹೆಸರುಕಾಳು, ಹತ್ತಿ, ಕಡಲೆ ವಿವಿಧ ಕೃಷಿ ಉತ್ಪನ್ನಗಳ ವ್ಯವಸಾಯದಿಂದ ರೈತರಿಗೆ ಆಗಿರುವ ನಷ್ಟದ ಅಂದಾಜು ಪ್ರಮಾಣವೆಷ್ಟು ;

(ಆ) ಸದರಿ ವರ್ಷದಿಂದ ಕಳಪೆ ಬೀಜದಿಂದಾಗಿ ಆಗಿರುವ ನಷ್ಟವನ್ನು ರೈತರಿಗೆ ಆಯಾ ಕಳಪೆ ಬೀಜಗಳ ಕಂಪನಿಗಳಿಂದ ಭರಿಸಲಾಗಿರುವ ಕುರಿತು ಮತ್ತು ಸರ್ಕಾರವೇ ಭರಿಸಿರುವ ಕುರಿತು ವಿವರ ನೀಡುವುದು ;



(ಇ) ರೈತರ ನಷ್ಟ ಭರಿಸದ ಕಂಪನಿಗಳ ಮೇಲೆ ಸರ್ಕಾರ ಯಾವ ರೀತಿ ಕ್ರಮ ಕೈಗೊಳ್ಳಲಾಗಿದೆ ; ಆ ರೀತಿ ಕೈಗೊಂಡಿರುವ ಕ್ರಮ ಇನ್ನೂ ಮುಂದುವರೆದಿದೆಯೇ ;

(ಈ) ಅಂತಹ ಕ್ರಮಕ್ಕೆ ಒಳಗಾದಂತಹ ಕಂಪನಿಗಳು ಯಾವುವು ?

## ರಾಯಚೂರು ಶಾಖೋತ್ಪನ್ನ ಘಟಕದಲ್ಲಿ ವಿದ್ಯುತ್ ಉತ್ಪಾದನೆ ಕುಂಠಿತ

**ಶ್ರೀ ರಾಮಚಂದ್ರ ಗೌಡ (ಪದವೀಧರರ ಕ್ಷೇತ್ರ) :–**

೧೭ (೯೫) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರವು ರಾಜ್ಯದ ವಿದ್ಯುತ್ ಪೂರೈಕೆಯಲ್ಲಿ ಶೇಕಡಾ ಎಷ್ಟು ವಿದ್ಯುತ್ ಪೂರೈಸುತ್ತದೆ ;

(ಆ) ಸದರಿ ಘಟಕದಲ್ಲಿ ವಿದ್ಯುತ್ ಉತ್ಪಾದನೆಯು ತೀವ್ರ ಕುಸಿತ ಕಂಡಿರುವುದು ನಿಜವೇ ; ನಿಜವಾಗಿದ್ದಲ್ಲಿ ಕಾರಣಗಳೇನು ;

(ಇ) ಈ ಕೊರತೆಯನ್ನು ಪೂರೈಸಲು ಸರ್ಕಾರ ಯಾವ ರೀತಿಯ ಕ್ರಮಗಳನ್ನು ಕೈಗೊಳ್ಳುವುದು ?

## ಮಳೆಯ ಅಭಾವದಿಂದ ಬೆಳೆಗಳು ನಾಶವಾಗಿದ್ದು, ನೀಡಬೇಕಾದ ಪರಿಹಾರ ಕುರಿತು

**ಶ್ರೀ ರಾಮಚಂದ್ರ ಗೌಡ (ಪದವೀಧರರ ಕ್ಷೇತ್ರ) :–**

೧೮ (೯೬) ಮಾನ್ಯ ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಚಿಂತಾಮಣಿ ತಾಲ್ಲೂಕಿನಲ್ಲಿರುವ ಮುಂಗಾನಹಳ್ಳಿ ಹೋಬಳಿಯಲ್ಲಿ ಪ್ರಸಕ್ತ ಸಾಲಿನಲ್ಲಿ ಬಿತ್ತಿದ ನೆಲಗಡಲೆ ಬೆಳೆ ಮಳೆಯ ಅಭಾವದಿಂದ

ಸಂಪೂರ್ಣ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ರಾಗಿ, ಜೋಳ, ಹುರುಳಿ ಇವೇ ಮೊದಲಾದ ಬೆಳೆಗಳು ಕೂಡ ಮಳೆಯ ಅಭಾವದಿಂದಾಗಿ ನಾಶವಾಗಿರುವುದು ನಿಜವೇ ; ಈ ತಾಲ್ಲೂಖಿನಲ್ಲಿ ಒಟ್ಟಾರೆ ಮಳೆಯ ಅಭಾವದಿಂದಾಗಿ ರೈತರುಗಳಿಗೆ ಆಗಿರುವ ನಷ್ಟವನ್ನು ಕುರಿತು ವಿವರ ನೀಡುವುದು ;

(ಇ) ಈ ಸಂಬಂಧ ಸರ್ಕಾರದಿಂದ ಯಾವ ರೀತಿಯ ಪರಿಹಾರ ನೀಡಲಾಗುವುದು (ವಿವರ ನೀಡುವುದು) ?

## ವಿದ್ಯುತ್ ಅಭಾವ ಮತ್ತು ಲೋಡ್‌ಶೆಡ್ಡಿಂಗ್

**ಶ್ರೀ ರಾಮಚಂದ್ರ ಗೌಡ (ಪದವೀಧರರ ಕ್ಷೇತ್ರ) :–**

೧೯ (೯೪) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ವಿದ್ಯುತ್ ಅಭಾವ ಉಂಟಾಗಿರುವುದು ನಿಜವೆ ;

(ಆ) ಪ್ರಸ್ತುತ ನಗರ, ಪಟ್ಟಣ ಮತ್ತು ಹಳ್ಳಿಗಳಲ್ಲಿ ಯಾವ ರೀತಿಯಲ್ಲಿ ವಿದ್ಯುತ್ ಪೂರೈಕೆಯಾಗುತ್ತಿದೆ ;

(ಇ) ಲೋಡ್ ಶೆಡ್ಡಿಂಗ್ ಮಾಡುತ್ತಿರುವುದು ನಿಜವೆ ;

(ಈ) ಬೆಂಗಳೂರು ಮಹಾನಗರದಲ್ಲಿಯೂ ವಿದ್ಯುತ್ ಅಭಾವವುಂಟಾಗುವುದೇ (ವಿವರ ನೀಡುವುದು) ;

(ಉ) ಒಟ್ಟಾರೆಯಾಗಿ ರಾಜ್ಯದ ವಿದ್ಯುತ್ ಕೊರತೆಯನ್ನು ಯಾವ ರೀತಿ ನೀಗಿಸಲಾಗುತ್ತದೆ ?



## ಅತಿವೃಷ್ಟಿಯಿಂದ ಗೋವಿನ ಜೋಳ, ಹತ್ತಿ ಬೆಳೆಗಳ ಕುಂಠಿತ

**ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) :–**

೨೦ (೧೦೧) ಮಾನ್ಯ ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಸತತವಾಗಿ ಸುರಿದ ಮಳೆಯಿಂದಾಗಿ ಗೋವಿನ ಜೋಳ ಹಾಗೂ ಹತ್ತಿ ಬೆಳೆಗೆ ತೇವಾಂಶ ಹೆಚ್ಚಾದ ಪರಿಣಾಮ ಬೆಳವಣಿಗೆಯಲ್ಲಿ ಕುಂಠಿತ ಉಂಟಾಗಿರುವುದರಿಂದ ಬೆಳೆಗಾರರಲ್ಲಿ ಅತಂಕ ವಾತಾವರಣ ನಿರ್ಮಾಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ (ವಿವರ ನೀಡುವುದು) ;

(ಆ) ರೈತರು ಬೆಳೆದ ಈ ಬೆಳೆಗೆ ಆದ ಹಾನಿಯನ್ನು ಸರ್ಕಾರ ಯಾವ ರೀತಿಯಲ್ಲಿ ಭರಿಸುತ್ತದೆ ?

## ನಗರೋತ್ಥಾನ ಯೋಜನೆಯಲ್ಲಿ ಅವ್ಯವಹಾರ

**ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) :–**

೨೧ (೧೦೨) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ನಗರೋತ್ಥಾನ ಯೋಜನೆ ಜಾರಿಯಲ್ಲಿರುವ ತಾಲ್ಲೂಕುಗಳು ಯಾವುವು ;

(ಆ) ಈ ಯೋಜನೆ ಅಡಿ ವಿವಿಧ ಪಟ್ಟಣ ಪಂಚಾಯಿತಿ, ನಗರಸಭೆ, ಪುರಸಭೆಗಳಿಗೆ ಕಳೆದ ೩ ವರ್ಷಗಳಿಂದ ನೀಡಿರುವ ಅನುದಾನವೆಷ್ಟು (ತಾಲ್ಲೂಕುವಾರು ವಿವರ ನೀಡುವುದು) ;

(ಇ) ಕಳೆದ ವರ್ಷದ ಅನುದಾನ ಇನ್ನೂ ವಿನಿಯೋಗಿಸದೇ ಇರುವ ಪ್ರಕರಣಗಳೆಷ್ಟು ; ಇದಕ್ಕೆ ಕಾರಣ ಯಾರು ;

(ಈ) ನಗರೋತ್ಥಾನ ಯೋಜನೆಯಲ್ಲಿ ತಾಲ್ಲೂಕಿನ ಬಹಳ ಕಡೆ ಸರಿಯಾದ ಕಾಮಗಾರಿ ನಿರ್ವಹಿಸದೇ ಅವ್ಯವಹಾರವಾಗಿರುತ್ತದೆಂದು ಸಾರ್ವಜನಿಕರಿಂದ ಮಾಹಿತಿ ಬಂದಿದ್ದು, ಇದು ನಿಜವೇ ;

(ಉ) ಹಾಗಾದರೆ, ಯಾವ ಯಾವ ಅಧಿಕಾರಿಗಳು ಇದರಲ್ಲಿ ಭಾಗಿಯಾಗಿರುತ್ತಾರೆ ಹಾಗೂ ಇವರ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ (ತಾಲ್ಲೂಕುವಾರು ಮಾಹಿತಿ ನೀಡುವುದು) ?

## ನಬಾರ್ಡ್ ಮತ್ತು ಆರ್.ಐ.ಡಿ.ಎಫ್. ಯೋಜನೆ

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) :–**

೨೨ (೧೦೦) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ನಬಾರ್ಡ್ ನೆರವಿನ ಆರ್.ಐ.ಡಿ.ಎಫ್. ಯೋಜನೆಯಡಿ ಕಳೆದ ಎರಡು ವರ್ಷಗಳಲ್ಲಿ ನಿರ್ಮಿಸಿರುವ ಸೇತುವೆಗಳ ಸಂಖ್ಯೆ ಎಷ್ಟು ; ಇದಕ್ಕಾಗಿ ಖರ್ಚು ಮಾಡಿರುವ ಹಣವೆಷ್ಟು (ವಿವರ ನೀಡುವುದು) ;

(ಆ) ಉತ್ತರ ಕನ್ನಡ ಜಿಲ್ಲೆಯಲ್ಲಿ ಯಾವ ಯಾವ ಗ್ರಾಮಗಳಲ್ಲಿ ಸೇತುವೆಗಳನ್ನು ನಿರ್ಮಿಸಲಾಗಿದೆ (ತಾಲ್ಲೂಕುವಾರು ವಿವರ ನೀಡುವುದು) ;

(ಇ) ಇದೇ ರೀತಿ ೨೦೧೪–೧೫ನೇ ಸಾಲಿನಲ್ಲಿ ಈ ಜಿಲ್ಲೆಗೆ ಸದರಿ ಯೋಜನೆಯಡಿ ಸೇತುವೆಗಳನ್ನು ನಿರ್ಮಿಸಲು ಕಾಯ್ದಿರಿಸಿದ ಅನುದಾನವೆಷ್ಟು (ವಿವರ ನೀಡುವುದು) ?



## ಯಶಸ್ವಿನಿ ಆರೋಗ್ಯ ವಿಮಾ ಯೋಜನೆ

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) :–**

೨೩ (೯೯) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಯಶಸ್ವಿನಿ ಆರೋಗ್ಯ ವಿಮಾ ಯೋಜನೆಯ ಸದಸ್ಯತ್ವವನ್ನು ಹೊಂದಿರುವವರ ಸಂಖ್ಯೆ ಎಷ್ಟು (ತಾಲ್ಲೂಕುವಾರು ವಿವರ ನೀಡುವುದು) ;

(ಆ) ಯಶಸ್ವಿನಿ ಆರೋಗ್ಯ ವಿಮಾ ಯೋಜನೆಯ ಪ್ರಯೋಜನ ಪಡೆದ ರೋಗಿಗಳ ಸಂಖ್ಯೆ ಎಷ್ಟು (ಎಲ್ಲಾ ಜಿಲ್ಲೆಗಳ, ತಾಲ್ಲೂಕುವಾರು ವಿವರ ನೀಡುವುದು) ;

(ಇ) ಸದರಿ ಜಿಲ್ಲೆಯಲ್ಲಿ ಯಶಸ್ವಿನಿ ಆರೋಗ್ಯ ವಿಮಾ ಯೋಜನೆಯಡಿಯಲ್ಲಿ ಚಿಕಿತ್ಸೆ ನೀಡುವ ಆಸ್ಪತ್ರೆಗಳು ಯಾವುವು (ತಾಲ್ಲೂಕುವಾರು ವಿವರ ನೀಡುವುದು) ?

## ಲೋಕೋಪಯೋಗಿ ಕಾಮಗಾರಿಗಳಿಗೆ ಅನುದಾನ

**ಶ್ರೀಮತಿ ಮೋಟಮ್ಮ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೨೪ (೧೦೫) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಚಿಕ್ಕಮಗಳೂರು ಜಿಲ್ಲೆಯ ಲೋಕೋಪಯೋಗಿ ಇಲಾಖೆಗೆ ಯಾವ ಯಾವ ಶೀರ್ಷಿಕೆಯಡಿ ಎಷ್ಟೆಷ್ಟು ಹಣ ಬಂದಿದೆ (ಕಳೆದ ೩ ವರ್ಷಗಳ ವಿವರಗಳನ್ನು ನೀಡುವುದು) ;

(ಆ) ಯಾವ್ಯಾವ ಶೀರ್ಷಿಕೆಯಡಿ ಎಷ್ಟೆಷ್ಟು ಹಣವನ್ನು ಹಂಚಿಕೆ ಮಾಡಲಾಗಿದೆ (ತಾಲ್ಲೂಕುವಾರು ವಿವರವನ್ನು ನೀಡುವುದು) ;

(ಇ) ಆ ಹಣವನ್ನು ಯಾವ ಯಾವ ಕಾಮಗಾರಿಗಳಿಗೆ ಹಂಚಿಕೆ ಮಾಡಲಾಗಿದೆ ;

(ಈ) ಆ ಕಾಮಗಾರಿಗಳ ಕೆಲಸ ಪೂರ್ಣವಾಗಿದೆಯೇ ಅಥವಾ ಇಲ್ಲವೆ (ವಿವರ ನೀಡುವುದು) ?

## ರಸ್ತೆಗಳ ದುರಸ್ತಿ

**ಶ್ರೀಮತಿ ಮೋಟಮ್ಮ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೨೫ (೧೦೩) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೂಡಿಗೆರೆ ವಿಧಾನಸಭಾ ವ್ಯಾಪ್ತಿಯಲ್ಲಿ ಒಟ್ಟು ಎಷ್ಟು ಉದ್ದದ ಜಿಲ್ಲಾ ಮುಖ್ಯ ರಸ್ತೆಗಳು ಮತ್ತು ಲೋಕೋಪಯೋಗಿ ಇಲಾಖೆ ವ್ಯಾಪ್ತಿಯ ರಸ್ತೆಗಳಿವೆ (ಈ ರಸ್ತೆಗಳಿಂದ ಸಂಪರ್ಕ ಹೊಂದಿರುವ ಊರು/ಗ್ರಾಮ/ಕಾಲೋನಿಗಳ ವಿವರ ಒದಗಿಸುವುದು) ; ಇವುಗಳಿಗೆ ಒದಗಿಸಿರುವ ಅನುದಾನ ಎಷ್ಟು ;

(ಆ) ಈ ರಸ್ತೆಗಳು ಬಹಳ ಹಾಳಾಗಿದ್ದು ಸಂಚಾರಕ್ಕೆ ಯೋಗ್ಯವಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಇವುಗಳ ದುರಸ್ತಿಗಾಗಿ ಸರ್ಕಾರ ಕೂಡಲೇ ಕೈಗೊಳ್ಳುವ ಕ್ರಮಗಳೇನು ?



## ಬ್ಯಾಕ್‌ಲಾಗ್ ಹುದ್ದೆಗಳ ತುಂಬುವಿಕೆ

**ಶ್ರೀಮತಿ ಮೋಟಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೬(೨೭೩) ಮಾನ್ಯ ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೃಷಿ ಇಲಾಖೆಯಲ್ಲಿ ತುಂಬ ಬೇಕಾಗಿರುವ ಬ್ಯಾಕ್‌ಲಾಗ್ ಹುದ್ದೆಗಳೆಷ್ಟು (ಹುದ್ದೆವಾರು ವಿವರಗಳನ್ನು ನೀಡುವುದು) ;

(ಆ) ಇನ್ನೂವರೆಗೂ ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬದಿರಲು ಕಾರಣವೇನು ;

(ಇ) ಎಷ್ಟು ದಿನಗಳೊಳಗಾಗಿ ಬಾಕಿಯಿರುವ ಸದರಿ ಹುದ್ದೆಗಳನ್ನು ತುಂಬಲಾಗುವುದು ?

## ಸಹಕಾರ ಸಂಘ ಸಂಸ್ಥೆಗಳಲ್ಲಿ ಬ್ಯಾಕ್‌ಲಾಗ್ ಹುದ್ದೆಗಳು

**ಶ್ರೀಮತಿ ಮೋಟಮ್ಮ (ವಿಧಾನ ಸಭೆಯಿಂದ ಚುನಾಯಿತರಾದವರು):–**

೨೭(೨೭೨) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೇ:–

(ಅ) ಸಹಕಾರ ಇಲಾಖೆಯಲ್ಲಿ ಮೀಸಲಾತಿ ಅನ್ವಯ ಹುದ್ದೆ ಭರ್ತಿ ಮಾಡಲಾಗಿದೆಯೇ ;

(ಆ) ಸಹಕಾರ ಇಲಾಖೆಯಲ್ಲಿ ಇನ್ನೂ ತುಂಬದಿರುವ ಬ್ಯಾಕ್‌ಲಾಗ್ ಹುದ್ದೆಗಳು ಯಾವುವು (ವಿವರಗಳನ್ನು ನೀಡುವುದು) ;

(ಇ) ಎಷ್ಟು ಸಮಯದೊಳಗೆ ಈ ಹುದ್ದೆಗಳನ್ನು ಭರ್ತಿ ಮಾಡಲಾಗುವುದು ?

## ಶಿರಾಡಿ ಘಾಟ್ ರಸ್ತೆ ಅಭಿವೃದ್ಧಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೮ (೧೭೪) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು–ಮಂಗಳೂರು ಮಾರ್ಗ ಮಧ್ಯದ ಶಿರಾಡಿ ಘಾಟ್ ರಸ್ತೆ ಅಭಿವೃದ್ಧಿಗೆ ಸರ್ಕಾರ ತೆಗೆದುಕೊಂಡ ಕ್ರಮವೇನು (ವಿವರ ನೀಡುವುದು) ;

(ಆ) ಶಿರಾಡಿ ಘಾಟ್ ರಸ್ತೆ ಅಭಿವೃದ್ಧಿಗೆ ರಾಜ್ಯ ಸರ್ಕಾರ ಯಾವ ದೇಶದ ಸಂಯೋಗದೊಂದಿಗೆ ಸೇರಿಕೊಂಡು ರಸ್ತೆ ಅಭಿವೃದ್ಧಿಗೆ ನೀಲಿ ನಕ್ಷೆಯನ್ನು ತಯಾರಿಸಲಾಗಿದೆ (ವಿವರ ನೀಡುವುದು) ;

(ಇ) ನೀಲಿ ನಕ್ಷೆಯನ್ನು ತಯಾರಿಸಿದ್ದಲ್ಲಿ ಟೆಂಡರ್ ಪ್ರಕ್ರಿಯೆಯಾಗಿದೆಯೇ ; ಆಗಿದ್ದಲ್ಲಿ, ಯಾವ ಸಂಸ್ಥೆಯು ಕಾಮಗಾರಿಯ ನಿರ್ವಹಣೆಯನ್ನು ವಹಿಸಿಕೊಂಡಿದೆ ;

(ಈ) ನೀಲಿ ನಕ್ಷೆಯನ್ನು ತಯಾರಿಸದೇ ಇದ್ದಲ್ಲಿ ಯಾವಾಗ ನೀಲಿ ನಕ್ಷೆಯನ್ನು ತಯಾರಿಸಿ ಕಾಮಗಾರಿ ಪ್ರಾರಂಭಿಸಲಾಗುವುದು ;

(ಉ) ಕಾಮಗಾರಿಯ ವಿಳಂಬದಿಂದಾಗಿ ರಸ್ತೆ ಹದಗೆಟ್ಟಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು (ವಿವರ ನೀಡುವುದು) ;

## ಸೌರ ವಿದ್ಯುತ್ ಪಾರ್ಕ್ ನಿರ್ಮಾಣ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೯(೧೭೬) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ವಿದ್ಯುತ್ ಅಭಾವದಿಂದಾಗಿ ಸೌರ ವಿದ್ಯುತ್ತನ್ನು ಅಳವಡಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ (ವಿವರ ನೀಡುವುದು) ;



(ಆ) ಕೇಂದ್ರ ಸರ್ಕಾರ ಉದ್ದೇಶಿಸಿದ ಸೌರಪಾರ್ಕ್ ಯೋಜನೆಗೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಪಾಲೆಷ್ಟು (ಪೂರ್ಣವಾದ ವಿವರ ನೀಡುವುದು) ;

(ಇ) ಸೌರಪಾರ್ಕ್ ಯೋಜನೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಯಾವ ರೀತಿಯಾಗಿ ತಯಾರಿ ನಡೆಸಿದೆ ;

(ಈ) ರಾಜ್ಯದ ಯಾವ ಯಾವ ಭಾಗದಲ್ಲಿ ಸೌರಪಾರ್ಕ್ ಯೋಜನೆಗೆ ಸರ್ಕಾರ ಸ್ಥಳಗಳನ್ನು ಗುರುತಿಸಿದೆ (ವಿವರವಾದ ಮಾಹಿತಿ ನೀಡುವುದು) ?

## ವಿದ್ಯುತ್ ಸಂಗ್ರಹದ ಸಮಸ್ಯೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೩೦(೧೭೭) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಪ್ರತಿ ವರ್ಷಕ್ಕೆ ವಾಣಿಜ್ಯ ಮತ್ತು ಇತರೆ ಉದ್ದೇಶಗಳಿಗೆ ಬೇಕಾಗಿರುವ ವಿದ್ಯುತ್ ಪ್ರಮಾಣ ಎಷ್ಟು (ವಿವರ ನೀಡುವುದು) ;

(ಆ) ಜಲವಿದ್ಯುತ್, ಥರ್ಮಲ್, ಪವನ ವಿದ್ಯುತ್, ಅಣುವಿದ್ಯುತ್ ಹಾಗೂ ಇತರೆ ಯೋಜನೆಯಿಂದ ರಾಜ್ಯವು ಎಷ್ಟು ಮೆಗಾವ್ಯಾಟ್ ವಿದ್ಯುತ್‌ನ್ನು ಉತ್ಪಾದಿಸುತ್ತದೆ (ವಿವರ ನೀಡುವುದು) ;

(ಇ) ಬೇಡಿಕೆಗೆ ತಕ್ಕಂತೆ ವಿದ್ಯುತ್ ದಾಸ್ತಾನು ಇದೆಯೇ ;

(ಈ) ದಾಸ್ತಾನು ಇಲ್ಲದಾದಲ್ಲಿ ಸರ್ಕಾರ ತೆಗೆದುಕೊಂಡ ಕ್ರಮವೇನು ?

## ಸ್ಥಳೀಯ ಸಂಸ್ಥೆಗಳ ಸ್ಥಾವರಗಳಿಗೆ ವಿದ್ಯುತ್ ದರ ನಿಗದಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೩೧ (೧೭೮) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೇ:–

(ಅ) ರಾಜ್ಯದಲ್ಲಿ ಗ್ರಾಹಕರಿಗೆ ವಿದ್ಯುತ್ ಸರಬರಾಜು ದರ ನಿಗದಿ ಮಾಡಲು ಇರುವ ಮಾನದಂಡ ಯಾವುದು (ವಿವರ ನೀಡುವುದು) ;

(ಆ) ವಾಣಿಜ್ಯ ಮತ್ತು ವಸತಿ ಉದ್ದೇಶಕ್ಕಾಗಿ ಪ್ರತಿ ಯೂನಿಟ್‌ಗೆ ಸರ್ಕಾರ ನಿಗದಿಪಡಿಸಿದ ದರವೆಷ್ಟು ;

(ಇ) ಕುಡಿಯುವ ನೀರು ಸರಬರಾಜು ಸ್ಥಾವರಗಳ ಮತ್ತು ವಿದ್ಯುತ್ ಬೀದಿ ದೀಪಗಳ ಸ್ಥಾವರದ ಪ್ರತಿ ಯೂನಿಟ್‌ಗೆ ಗ್ರಾಮ ಪಂಚಾಯತಿಗಳಿಗೆ ವಿಧಿಸುವ ಹಣವೆಷ್ಟು ;

(ಈ) ಗ್ರಾಮ ಪಂಚಾಯತ್‌ಗಳ ವಿದ್ಯುತ್ ಸ್ಥಾವರಕ್ಕೆ ವಾಣಿಜ್ಯ ದರವನ್ನು ವಿಧಿಸುವುದು ಸಮಂಜಸವೇ ;

(ಉ) ಸಮಂಜಸವಲ್ಲದಿದ್ದರೆ, ಸಬ್ಸಿಡಿ ದರದಲ್ಲಿ ಸ್ಥಳೀಯ ಸರ್ಕಾರಗಳಿಗೆ ವಿದ್ಯುತ್ ಪೂರೈಕೆ ಮಾಡಲು ಸರ್ಕಾರಕ್ಕೆ ತೊಂದರೆ ಇದೆಯೇ ;

(ಊ) ಇಲ್ಲದಿದ್ದರೆ, ಸ್ಥಳೀಯ ಸರ್ಕಾರಗಳ ವಿದ್ಯುತ್ ಸ್ಥಾವರಕ್ಕೆ ಸಬ್ಸಿಡಿ ದರದಲ್ಲಿನ ವಿಚಾರವನ್ನು ಯಾವಾಗ ಅನುಷ್ಠಾನಕ್ಕೆ ತರಲಾಗುವುದು ?



## ಜಲಾನಯನ ಮತ್ತು ಕೃಷಿ ಒಗ್ಗೂಡಿಸುವುದರಿಂದ ಆಗುತ್ತಿರುವ ಸಮಸ್ಯೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

೩೨ (೧೭೫) ಮಾನ್ಯ ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಜಲಾನಯನ ಮತ್ತು ಕೃಷಿ ಇಲಾಖೆಯ ಒಗ್ಗೂಡಿದ್ದರಿಂದ ಕೃಷಿ ಇಲಾಖೆಯು ಕಾರ್ಯಕ್ರಮದ ಅನುಷ್ಠಾನದಲ್ಲಿ ತೊಂದರೆಯುಂಟಾಗುವುದಿಲ್ಲವೆ ;

(ಆ) ೨೦೧೪–೧೫ನೇ ಸಾಲಿನಲ್ಲಿ ಎಲ್ಲಾ ಜಿಲ್ಲೆಯಲ್ಲಿ ಜಲಾನಯನದ ಕಾರ್ಯಕ್ರಮದ ಕ್ರಿಯಾ ಯೋಜನೆಯನ್ನು ತಯಾರಿಸಲಾಗಿದೆಯೇ ;

(ಇ) ತಯಾರಿಸಿದ್ದಲ್ಲಿ, ಕ್ರಿಯಾ ಯೋಜನೆಯ ಜಿಲ್ಲಾವಾರು ಮಾಹಿತಿ ನೀಡುವುದು ;

(ಈ) ಕ್ರಿಯಾ ಯೋಜನೆಯಲ್ಲಿದ್ದಂತೆ, ಅನುಷ್ಠಾನಗೊಂಡ ಜಿಲ್ಲಾವಾರು ಕಾಮಗಾರಿಗಳು ಯಾವುವು (ಮಾಹಿತಿ ನೀಡುವುದು) ?

## ಪ್ರತಿದಿನದ ವಿದ್ಯುತ್ ಬೇಡಿಕೆ

**ಶ್ರೀ ಅಲ್ಲಮಪ್ರಭು ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೩೩ (೧೮೩) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಲ್ಬುರ್ಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಪ್ರತಿದಿನದ ವಿದ್ಯುತ್ ಬೇಡಿಕೆ ಎಷ್ಟು ;

(ಆ) ಈ ಬೇಡಿಕೆಗೆ ಅನುಗುಣವಾಗಿ ವಿದ್ಯುತ್ ಪೂರೈಕೆ ಮಾಡಲಾಗುತ್ತಿದೆಯೇ ಇಲ್ಲವಾದಲ್ಲಿ, ವಿದ್ಯುತ್ ಬೇಡಿಕೆ ಮತ್ತು ಲಭ್ಯತೆ ನಡುವೆ ಇರುವ ಅಂತರವನ್ನು ಕಡಿಮೆ ಮಾಡುವ ದಿಸೆಯಲ್ಲಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ;

(ಇ) ಈ ಜಿಲ್ಲೆಗಳಲ್ಲಿ ಮಂಜೂರಾದ ಲೈನ್‌ಮ್ಯಾನ್ (ನಿರ್ವಹಣಾ ಸಿಬ್ಬಂದಿ) ಹುದ್ದೆಗಳೆಷ್ಟು (ಉಪ ವಿಭಾಗವಾರು ವಿವರ ನೀಡುವುದು) ?

## ಹನಿ ನೀರಾವರಿ ಫಲಾನುಭವಿಗಳು

**ಶ್ರೀ ಅಲ್ಲಮ ಪ್ರಭು ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು):–**

೩೪ (೧೮೦) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಲ್ಬುರ್ಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ತೋಟಗಾರಿಕೆ ಇಲಾಖೆಯ ಹನಿ ನೀರಾವರಿ ಫಲಾನುಭವಿಗಳ ಸಂಖ್ಯೆ ಎಷ್ಟು (ಜಿಲ್ಲಾವಾರು, ತಾಲ್ಲೂಕುವಾರು ಮಾಹಿತಿ ನೀಡುವುದು) ;

(ಆ) ಎಷ್ಟು ಫಲಾನುಭವಿಗಳಿಗೆ ಸಹಾಯ ಧನ ದೊರಕಿದೆ ;

(ಇ) ಇನ್ನೂ ಎಷ್ಟು ಫಲಾನುಭವಿಗಳಿಗೆ ಸಹಾಯ ಧನ ದೊರಕಬೇಕಾಗಿರುತ್ತದೆ ಈ ವಿಳಂಬಕ್ಕೆ ಕಾರಣಗಳೇನು (ಮಾಹಿತಿ ನೀಡುವುದು) ?



## ಸೇವಾ ಸಹಕಾರಿ ಸಂಘಗಳ ಮೂಲಕ ರೈತರ ಸಾಲ

**ಶ್ರೀ ಅಲ್ಲಮ ಪ್ರಭು ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

೩೫ (೧೮೭) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಸೇವಾ ಸಹಕಾರಿ ಸಂಘಗಳ ಮೂಲಕ ಶೂನ್ಯ ಬಡ್ಡಿ ದರದಲ್ಲಿ ಕಲ್ಬುರ್ಗಿ ಮತ್ತು ಯಾದಗಿರಿ ಜಿಲ್ಲೆಗಳ ಎಷ್ಟು ರೈತರಿಗೆ ಸರ್ಕಾರ ಸಾಲ ಮಂಜೂರು ಮಾಡಿದೆ ;

(ಆ) ಈ ಜಿಲ್ಲೆಗಳಲ್ಲಿ ಇನ್ನೂ ಎಷ್ಟು ರೈತರ ಕೋರಿಕೆ ಬಾಕಿ ಉಳಿದಿದೆ (ಸಂಪೂರ್ಣ ಮಾಹಿತಿ ನೀಡುವುದು) ;

(ಇ) ಈ ಭಾಗದಲ್ಲಿ ಈ ಬಾರಿ ಬರಗಾಲ ತೀವ್ರವಾಗಿ ಕಾಡುತ್ತಿರುವುದರಿಂದ ಈ ಹಿಂದೆ ಸಾಲ ಪಡೆದ ರೈತರ ಸಾಲ ಮನ್ನಾ ಮಾಡಲು ಕ್ರಮ ಕೈಗೊಳ್ಳಲಾಗಿದೆಯೇ ?

## ವಕ್ಫ್ ಮಂಡಳಿಯಿಂದ ನೀಡಲಾದ ಅನುದಾನ

**ಶ್ರೀ ಅಲ್ಲಮ ಪ್ರಭು ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು):–**

೩೬ (೧೨೯) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ೩ ವರ್ಷಗಳಲ್ಲಿ ವಕ್ಫ್ ಮಂಡಳಿಯಿಂದ ಕಲ್ಬುರ್ಗಿ ಮತ್ತು ಯಾದಗಿರಿ ಜಿಲ್ಲೆಗಳಿಗೆ ನೀಡಲಾದ ಅನುದಾನದ ಮೊತ್ತವೆಷ್ಟು (ತಾಲ್ಲೂಕುವಾರು ವಿವರ ನೀಡುವುದು) ;

(ಆ) ಈ ಅವಧಿಯಲ್ಲಿ ಕಲ್ಬುರ್ಗಿ ಮತ್ತು ಯಾದಗಿರಿ ಜಿಲ್ಲೆಗಳಿಂದ ಅನುದಾನ ಕೋರಿ ಬಂದಿದ್ದ ಪ್ರಸ್ತಾವನೆ ಸಂಖ್ಯೆ ಎಷ್ಟು ; ಈ ಪ್ರಸ್ತಾವನೆಗಳಿಗೆ ಎಷ್ಟೆಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ ;

(ಇ) ಪ್ರಸಕ್ತ ಸಾಲಿನಲ್ಲಿ ವಕ್ಫ್ ಮಂಡಳಿಯಿಂದ ಅನುದಾನವನ್ನು ಕೋರಿ ಎರಡು ಜಿಲ್ಲೆಯ ವಿವಿಧ ಮತ ಕ್ಷೇತ್ರಗಳಿಂದ ಎಷ್ಟು ಪ್ರಸ್ತಾವನೆಗಳು ಬಂದಿವೆ ;

(ಈ) ಇವುಗಳ ಪೈಕಿ ಎಷ್ಟು ಪ್ರಸ್ತಾವನೆಗಳಿಗೆ ಮಂಜೂರಾತಿ ನೀಡಲಾಗಿದೆ ಹಾಗೂ ಎಷ್ಟು ಹಣವನ್ನು ಇಲ್ಲಿಯವರೆಗೆ ಬಿಡುಗಡೆ ಮಾಡಲಾಗಿದೆ ;

(ಉ) ವಕ್ಫ್ ಮಂಡಳಿಯಿಂದ ಹೈದರಾಬಾದ್ ಕರ್ನಾಟಕ ಜಿಲ್ಲೆಗಳಿಗೆ ಹೆಚ್ಚು ಅನುದಾನ ಬಿಡುಗಡೆ ಮಾಡುವಂತೆ ಪ್ರಸ್ತಾವನೆ ಬಂದಿದೆಯೇ ?

## ಈರುಳ್ಳಿ ಬೆಳೆ ನಾಶ ಹಾಗೂ ರೈತರಿಗೆ ಪರಿಹಾರ

**ಶ್ರೀ ಜಿ. ರಘು ಆಚಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೩೭ (೨೦೯) ಮಾನ್ಯ ಕೃಷಿ ಮಾರುಕಟ್ಟೆ ಹಾಗೂ ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೇ:–

(ಅ) ಚಿತ್ರದುರ್ಗ ಹಾಗೂ ದಾವಣಗೆರೆ ಜಿಲ್ಲೆಗಳಲ್ಲಿ ಒಟ್ಟು ಎಷ್ಟು ಎಕರೆ ಈರುಳ್ಳಿ ಬೆಳೆ ನಾಶವಾಗಿದೆ (ತಾಲ್ಲೂಕುವಾರು ವಿವರ ನೀಡುವುದು) ;

(ಆ) ಒಂದು ಹೆಕ್ಟೇರ್ ಪ್ರದೇಶದಲ್ಲಿ ಈರುಳ್ಳಿ ಬೆಳೆಯಲು ರೈತರಿಗೆ ತಗಲುವ ವೆಚ್ಚವೆಷ್ಟು ;

(ಇ) ಸದರಿ ಜಿಲ್ಲೆಗಳಲ್ಲಿ ಈರುಳ್ಳಿ ಬೆಳೆ ನಾಶವಾಗಿರುವುದಕ್ಕೆ ಈವರೆಗೆ ಸರ್ಕಾರದ ವತಿಯಿಂದ ಎಷ್ಟು ಪರಿಹಾರ ನೀಡಲಾಗಿದೆ ಸದರಿ ಪರಿಹಾರದ ಮೊತ್ತವು ರೈತರಿಗೆ ತೃಪ್ತಿದಾಯಕವೇ (ವಿವರ ನೀಡುವುದು) ?



## ಕಬ್ಬನ್ ಪಾರ್ಕ್ ಉದ್ಯಾನವನದ ಒತ್ತುವರಿ.

**ಶ್ರೀ ಟಿ. ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು) ಹಾಗೂ ಶ್ರೀ ಬಿ. ರಾಮಕೃಷ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೮ (೨೧೦+೨೪೧) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೇ:–

(ಅ) ಬೆಂಗಳೂರಿನ ಕಬ್ಬನ್ ಪಾರ್ಕ್ ಉದ್ಯಾನವನವನ್ನು ಒತ್ತುವರಿ ಮಾಡಿಕೊಂಡು, ಅನಧಿಕೃತ ಕಟ್ಟಡಗಳನ್ನು ನಿರ್ಮಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಒತ್ತುವರಿ ಮಾಡಿರುವ ವಿಸ್ತೀರ್ಣವೆಷ್ಟು (ಒತ್ತುವರಿದಾರರ ಹೆಸರು ಮತ್ತು ವಿಳಾಸದ ಪೂರ್ಣ ಮಾಹಿತಿ ನೀಡುವುದು) ;

(ಇ) ಒತ್ತುವರಿದಾರರ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಲೋಕೋಪಯೋಗಿ ರಸ್ತೆ ಅಭಿವೃದ್ಧಿ.

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ):–**

೩೯(೨೧೩) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹಿರೆಬಾಗೇವಾಡಿ ಕ್ರಾಸ್‌ದಿಂದ ಬೈಲಹೊಂಗಲ–ಸವದತ್ತಿ ರಸ್ತೆಯು ಮೇಲಿಂದ ಮೇಲೆ ಸಂಪೂರ್ಣವಾಗಿ ಹಾಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಸದರಿ ರಸ್ತೆಯನ್ನು ಅಭಿವೃದ್ಧಿಪಡಿಸಲು ವಿಶ್ವ ಬ್ಯಾಂಕ್, ನಬಾರ್ಡ್ ಅಥವಾ ಬೇರೆ ಯಾವುದಾದರೂ ಯೋಜನೆಯಡಿ ಕೈಗೆತ್ತಿಕೊಳ್ಳಲಾಗುವುದೇ ;

(ಇ) ಈ ರಸ್ತೆಯನ್ನು ಅಭಿವೃದ್ಧಿಪಡಿಸಲು ಎಷ್ಟು ಹಣ ಬೇಕಾಗುವುದು ಹಾಗೂ ಇದಕ್ಕೆ ಎಷ್ಟು ಸಮಯ ಅಗತ್ಯವಿರುತ್ತದೆ ?

## ಕೃಷಿ ಮಾರುಕಟ್ಟೆಯ ಹಮಾಲಿಗಳಿಗೆ ವಸತಿ ಸೌಲಭ್ಯ.

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ):–**

೪೦ (೨೧೪) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಳಗಾವಿ ಜಿಲ್ಲೆ, ಬೈಲಹೊಂಗಲದ ಕೃಷಿ ಮಾರುಕಟ್ಟೆಯಲ್ಲಿ ಕೆಲಸ ಮಾಡುತ್ತಿರುವ ಹಮಾಲಿಗಳಿಗೆ ಸ್ವಂತ ಮನೆಗಳು ಇಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬೈಲಹೊಂಗಲದಲ್ಲಿ ಕೃಷಿ ಮಾರುಕಟ್ಟೆ ವತಿಯಿಂದ ಹಮಾಲಿಗಳಿಗೆ ಮನೆಗಳ ನಿರ್ಮಾಣಕ್ಕಾಗಿ ಈಗಾಗಲೇ ಎಷ್ಟು ಎಕರೆ ಸ್ಥಳವನ್ನು ಮೀಸಲಿಡಲಾಗಿದೆ; ಇದನ್ನು ಯಾವ ವರ್ಷ ಖರೀದಿಸಲಾಯಿತು;

(ಇ) ಈಗಾಗಲೇ ಬೈಲಹೊಂಗಲ ಕೃಷಿ ಮಾರುಕಟ್ಟೆ ಸಮಿತಿಯವರು ಹಮಾಲಿಗಳಿಗೆ ಮನೆಗಳನ್ನು ಕಟ್ಟುವ ಸಲುವಾಗಿ ಅನುದಾನದ ಬೇಡಿಕೆಯನ್ನಿಟ್ಟು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿರುವುದು ನಿಜವೇ;

(ಈ) ಸದರಿ ಪ್ರಸ್ತಾವನೆಯ ಕುರಿತಾಗಿ ಸರ್ಕಾರವು ತೆಗೆದುಕೊಂಡ ಕ್ರಮಗಳೇನು ?



## ತೋಟಗಾರಿಕೆಗೆ ವಿವಿಧ ಸೌಲಭ್ಯಗಳು.

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ):–**

೪೧(೨೧೨) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬಾಗಲಕೋಟೆ ಜಿಲ್ಲೆಯು ತೋಟಗಾರಿಕೆ ಬೆಳೆಗಳಿಗೆ ಪ್ರಸಿದ್ಧಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ತೋಟಗಾರಿಕೆಯಲ್ಲಿ ತೊಡಗಿಸಿಕೊಳ್ಳಲು ಜಿಲ್ಲೆಯ ರೈತರಿಗೆ ಒದಗಿಸಿರುವ ಸೌಲಭ್ಯಗಳಾವುವು ;

(ಇ) ಜಿಲ್ಲಾ ಹಾಪ್‌ಕಾಮ್ಸ್‌ನ್ನು ಮಾರಾಟ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಳ್ಳಲು ಕ್ರಮಕೈಗೊಳ್ಳಲಾಗುವುದೇ; ಹಾಗಿದ್ದಲ್ಲಿ, ಯಾವ ರೀತಿ ಕ್ರಮಕೈಗೊಳ್ಳಲಾಗುವುದು ?

## ಗಾಜಿನ ಮನೆ ನಿರ್ಮಾಣ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ):–**

೪೨ (೨೧೧) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಳಗಾವಿಯಲ್ಲಿ ಗಾಜಿನ ಮನೆ ನಿರ್ಮಾಣ ಮಾಡಲು ಸರ್ಕಾರ ಅನುಮೋದನೆ ನೀಡಿರುವ ಸಂಗತಿ ನಿಜವೇ ;

(ಆ) ಈ ಯೋಜನೆಗೆ ಸರ್ಕಾರ ಎಷ್ಟು ಮೊತ್ತಕ್ಕೆ ಅನುಮೋದನೆ ನೀಡಲಾಗಿದೆ ;

(ಇ) ಈ ಯೋಜನೆಗೆ ಸರ್ಕಾರ ಅನುಮೋದನೆ ನೀಡಿದ್ದರೂ ಕೂಡಾ ಕೆಲಸ ಪ್ರಾರಂಭವಾಗದೇ ಇರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಗುವುದು ?

## ಕೃಷಿ ಮಾರುಕಟ್ಟೆ ಗೋದಾಮುಗಳ ನಿರ್ಮಾಣ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ):–**

೪೩ (೨೧೫) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೈಲಹೊಂಗಲ ಪಟ್ಟಣ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಗೋದಾಮುಗಳು ಇಲ್ಲದೆ ಇರುವುದರಿಂದ ರೈತರು ಬೆಳೆದ ಧಾನ್ಯಗಳನ್ನು ಸಂಗ್ರಹಿಸಿಡಲು ಸಾಧ್ಯವಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬೈಲಹೊಂಗಲ ಕೃಷಿ ಮಾರುಕಟ್ಟೆ ಸಮಿತಿಯವರು ಗೋದಾಮು ನಿರ್ಮಾಣದ ಸಲುವಾಗಿ ಪ್ರಸ್ತಾವನೆ ಸಲ್ಲಿಸಿರುವುದು ನಿಜವೇ ;

(ಇ) ಹಾಗಾದರೆ, ಸರ್ಕಾರವು ಕೂಡಲೇ ಹಣ ಬಿಡುಗಡೆ ಮಾಡಿ ಸದರಿ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದೇ ?

## ಗ್ರಾಮ ಪಂಚಾಯತ್‌ಗಳನ್ನು "ಪಟ್ಟಣ ಪಂಚಾಯತ್" ಗಳಾಗಿ ಪರಿವರ್ತಿಸುವುದು.

**ಶ್ರೀ ಐವನ್ ಡಿ' ಸೋಜಾ (ನಾಮನಿರ್ದೇಶನ ಹೊಂದಿದವರು):–**

೪೪ (೨೧೭) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ಯಾವ ಯಾವ ಗ್ರಾಮ ಪಂಚಾಯತ್‌ಗಳನ್ನು ಪಟ್ಟಣ ಪಂಚಾಯತ್ ಆಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆ; (ವಿವರ ನೀಡುವುದು) ;



(ಆ) ಪಟ್ಟಣ ಪಂಚಾಯತ್ ಆಗಿ ಮಾರ್ಪಾಡುಗೊಂಡಲ್ಲಿ ರಾಜ್ಯ ಸರ್ಕಾರದಿಂದ ನೀಡುವ ಹೆಚ್ಚುವರಿ ಅನುದಾನವೆಷ್ಟು (ವಿವರ ನೀಡುವುದು) ;

(ಇ) ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉಡುಪಿ ಜಿಲ್ಲೆಗಳಲ್ಲಿ ನಗರಸಭೆ, ಪುರಸಭೆಗಳನ್ನು ಮೇಲ್ದರ್ಜೆಗೇರಿಸುವ ಉದ್ದೇಶವೇನಾದರೂ ಸರ್ಕಾರದ ಮುಂದೆ ಇದೆಯೇ (ವಿವರ ನೀಡುವುದು) ;

(ಈ) ಉಳ್ಳಾಲ ಪುರಸಭೆಯನ್ನು ಮಂಗಳೂರು ಮಹಾನಗರ ಪಾಲಿಕೆಯನ್ನು ಗ್ರೇಟರ್ ಮಹಾನಗರ ಪಾಲಿಕೆಯನ್ನಾಗಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ; ಇದ್ದರೆ, ಯಾವ ಯಾವ ಭಾಗಗಳನ್ನು ಸೇರ್ಪಡೆಗೊಳಿಸುವ ಪ್ರಸ್ತಾವನೆ ಇದೆ (ವಿವರ ನೀಡುವುದು) ;

(ಉ) ಪುರಸಭೆ, ನಗರಸಭೆ, ಪಟ್ಟಣ ಪಂಚಾಯತ್ ಸದಸ್ಯರಿಗೆ ಮಾಸಿಕ ಗೌರವ ಧನ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ಪ್ರಸ್ತುತ ನೀಡುವ ಸಂಭಾವನೆ ಎಷ್ಟು ಈ ನಿಟ್ಟಿನಲ್ಲಿ ಸದರಿ ಸದಸ್ಯರುಗಳಿಂದ ಸರ್ಕಾರಕ್ಕೆ ಬೇಡಿಕೆ ಸಲ್ಲಿಸಲಾಗಿದೆಯೇ (ವಿವರ ನೀಡುವುದು) ?

## ಕ್ರೈಸ್ತ ಅಲ್ಪಸಂಖ್ಯಾತರ ಅಭಿವೃದ್ಧಿ ಯೋಜನೆ.

**ಶ್ರೀ ಐವನ್ ಡಿ' ಸೋಜಾ (ನಾಮನಿರ್ದೇಶನ ಹೊಂದಿದವರು):–**

೪೫(೨೨೦) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ೨೦೧೨–೧೪ನೇ ಸಾಲುಗಳಲ್ಲಿ ಕ್ರೈಸ್ತ ಅಲ್ಪಸಂಖ್ಯಾತ ಅಭಿವೃದ್ಧಿ ಯೋಜನೆಯಡಿ ಬಿಡುಗಡೆಯಾದ ಒಟ್ಟು

ಅನುದಾನವೆಷ್ಟು, ಯಾವ ಯಾವ ಕಾರ್ಯಕ್ರಮದ ಅಡಿಯಲ್ಲಿ ಬಿಡುಗಡೆ ಮಾಡಿದ ಒಟ್ಟು ಅನುದಾನ ಎಷ್ಟು, (ವಿವರ ನೀಡುವುದು) ಸಮುದಾಯ ಭವನಗಳಿಗಾಗಿ ನಗರ ಮತ್ತು ಗ್ರಾಮಾಂತರ ಪ್ರದೇಶಗಳಿಂದ ಬಂದಿರುವ ಅರ್ಜಿಗಳೆಷ್ಟು, ಯಾವ ಯಾವ ಜಿಲ್ಲೆಗಳಿಗೆ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ (ವಿವರ ನೀಡುವುದು) ;

(ಆ) ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಕ್ರೈಸ್ತ ಅಭಿವೃದ್ಧಿ ಸಮಿತಿಯಲ್ಲಿ ಒಟ್ಟು ಸದಸ್ಯರ ಸಂಖ್ಯೆ ಎಷ್ಟು, ಶಾಸಕರು ಈ ಸಮಿತಿಯ ಸದಸ್ಯರುಗಳಾಗಿದ್ದಾರೆಯೇ, ಯಾವ ಯಾವ ಶಾಸಕರು ಸಮಿತಿಯ ಸದಸ್ಯರಾಗಿದ್ದಾರೆ, ಈ ಸಮಿತಿಯು ಎಷ್ಟು ಸಭೆಗಳನ್ನು ನಡೆಸಿದೆ (ವಿವರ ನೀಡುವುದು) ;

(ಇ) ಕ್ರೈಸ್ತ ಅಲ್ಪಸಂಖ್ಯಾತರ ಅಭಿವೃದ್ಧಿಗೆ ಪ್ರತ್ಯೇಕ ನಿಗಮ ರಚನೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ, ಈ ಬಗ್ಗೆ ಕ್ರೈಸ್ತ ಸಮುದಾಯದಿಂದ ಪ್ರಸ್ತಾವನೆ ಬಂದಿದೆಯೇ, (ವಿವರ ನೀಡುವುದು) ಪ್ರಸ್ತುತ ಈ ಅಭಿವೃದ್ಧಿ ಪ್ರಾಧಿಕಾರ ಎಲ್ಲಿ ಕಾರ್ಯನಿರ್ವಹಿಸುತ್ತಿದೆ ;

(ಈ) ಕ್ರೈಸ್ತ ಅಲ್ಪಸಂಖ್ಯಾತ ಯೋಜನೆಯಡಿಯಲ್ಲಿ ಜಿಲ್ಲಾವಾರು ಅರ್ಜಿಗಳನ್ನು ಯಾವ ಯಾವ ಕಛೇರಿಯಲ್ಲಿ ಸ್ವೀಕರಿಸಲಾಗುತ್ತಿದೆ (ವಿವರ ನೀಡುವುದು) ?



## ಮಂಗಳೂರು ವಿದ್ಯುತ್ ಸರಬರಾಜು ಕಂಪನಿಯ ಕಾರ್ಯನಿರ್ವಹಣೆ

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶನ) :–**

೪೬ (೨೧೮) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಂಗಳೂರು ವಿದ್ಯುತ್ ಸರಬರಾಜು ಕಂಪನಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಒಟ್ಟು ನೌಕರರ/ಅಧಿಕಾರಿಗಳ ಎಷ್ಟು ಹುದ್ದೆಗಳು ಖಾಲಿ ಇವೆ (ವಿವರ ನೀಡುವುದು) ;

(ಆ) ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಲೈನ್‌ಮೆನ್‌ಗಳ ಸಂಖ್ಯೆ ಎಷ್ಟು, ಮಂಜೂರು ಮಾಡಲಾದ ಹುದ್ದೆಗಳು ಎಷ್ಟು, ಹುದ್ದೆಗಳು ಖಾಲಿಯಿದ್ದರೆ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗಿದೆಯೇ ;

(ಇ) ಲೈನ್‌ಮೆನ್‌ಗಳ ಸಂಖ್ಯೆ ಕಡಿಮೆ ಇರುವುದರಿಂದ ವಿದ್ಯುತ್ ಪ್ರಸರಣದಲ್ಲಿ ಸಮಸ್ಯೆಗಳು ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರವು ಕೈಗೊಂಡ ಕ್ರಮಗಳೇನು ;

(ಈ) ಉಡುಪಿ ವಿದ್ಯುತ್ ಕಂಪನಿಯಿಂದ ಉತ್ಪಾದನೆಯಾಗುವ ಒಟ್ಟು ವಿದ್ಯುತ್ ಪ್ರಮಾಣ ಎಷ್ಟು, ಸರ್ಕಾರದ ಯಾವ ದರದಲ್ಲಿ ವಿದ್ಯುತ್ತನ್ನು ಖರೀದಿ ಮಾಡಲು ಒಪ್ಪಂದ ಮಾಡಿಕೊಂಡಿದೆ, ಈ ಕಂಪನಿಯಿಂದ ಹೆಚ್ಚು ವಿದ್ಯುತ್ ಉತ್ಪಾದನೆಯನ್ನು ಮಾಡಲು ಸರ್ಕಾರದಿಂದ ಬೇಡಿಕೆ ಸಲ್ಲಿಸಲಾಗಿದೆಯೇ ;

(ಉ) ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆಗೆ ಯಾವ ಯಾವ ನೂತನ ಕ್ರಮಕೈಗೊಳ್ಳಲಾಗಿದೆ, ಎಷ್ಟು ವಿದ್ಯುತ್ (ಮೆಗಾವ್ಯಾಟ್) ಉತ್ಪಾದನೆ ಮಾಡಲು ಗುರಿ ಹೊಂದಲಾಗಿದೆ, ನೂತನ ಯೋಜನೆಗಳು ಇದ್ದಲ್ಲಿ ರಾಜ್ಯದ ಯಾವ ಯಾವ ಭಾಗದಲ್ಲಿ ಈ ಘಟಕಗಳನ್ನು ಸ್ಥಾಪಿಸಲು ಕ್ರಮಕೈಗೊಳ್ಳಲಾಗಿದೆ (ವಿವರ ನೀಡುವುದು) ?

## ಶಿರಾಡಿ ಘಾಟ್ ಚತುಷ್ಪಥ ರಸ್ತೆ ನಿರ್ಮಾಣ

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶನ) :–**

೪೭ (೨೧೯) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಶಿರಾಡಿ ಘಾಟ್ ಚತುಷ್ಪಥ ರಸ್ತೆಯನ್ನಾಗಿ ನಿರ್ಮಾಣ ಮಾಡುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ, ಇದ್ದರೆ ಯಾವ ಹಂತದಲ್ಲಿ ಇದೆ (ವಿವರ ನೀಡುವುದು) ;

(ಆ) ಶಿರಾಡಿ ರಸ್ತೆಯಲ್ಲಿ ಚರಂಡಿ ವ್ಯವಸ್ಥೆಯನ್ನು ಸರಿಯಾಗಿ ರಚನೆ ಮಾಡದೇ, ರಸ್ತೆಯಲ್ಲಿ ನೀರು ಹರಿದ ಪರಿಣಾಮದಿಂದ ರಸ್ತೆ ಹಾಳಾಗಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಚರಂಡಿ ವ್ಯವಸ್ಥೆಗಳ ಬಗ್ಗೆ ಕೈಗೊಂಡ ಕ್ರಮಗಳೇನು, (ವಿವರ ನೀಡುವುದು), ಎಷ್ಟು ಅನುದಾನ ಈ ಕಾಮಗಾರಿಗಾಗಿ ಬಿಡುಗಡೆ ಮಾಡಲಾಗಿದೆ ;

(ಈ) ಕಳೆದ ೩ ವರ್ಷದಿಂದ ಇಲ್ಲಿಯವರೆಗೆ ರಸ್ತೆ ದುರಸ್ತಿಗೆ ಖರ್ಚು ಮಾಡಿದ ಹಣವೆಷ್ಟು (ವಿವರ ನೀಡುವುದು) ;



(ಉ) ಶಿರಾಡಿ ಘಾಟ್ ರಸ್ತೆಯಲ್ಲಿ ಸುರಂಗ ಮಾರ್ಗ ರಚನೆಯ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ, ಇದ್ದರೆ ಯಾವ ಹಂತದಲ್ಲಿದೆ, ಶಿರಾಡಿ ಘಾಟ್‌ಗೆ ಪರ್ಯಾಯ ಮಾರ್ಗವಾಗಿ ಬಿಸಿಲೆ ಘಾಟ್ ಅಭಿವೃದ್ಧಿಪಡಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ, ಈ ಘಾಟ್ ರಸ್ತೆಯನ್ನು ದ್ವಿಮುಖ ರಸ್ತೆಯನ್ನಾಗಿ ಅಭಿವೃದ್ಧಿಗೊಳಿಸಲು ಸರ್ಕಾರ ಚಿಂತಿಸುತ್ತಿದೆಯೇ (ವಿವರ ನೀಡುವುದು) ?

## ರಾಯಚೂರು ಕೃಷಿ ವಿಶ್ವವಿದ್ಯಾನಿಲಯಕ್ಕೆ ಅನುದಾನ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :–**

೪೮ (೨೨೨) ಮಾನ್ಯ ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಯಚೂರು ಕೃಷಿ ವಿಶ್ವವಿದ್ಯಾಲಯಕ್ಕೆ ಕಳೆದ ೨೦೦೯–೧೦ ರಿಂದ ೨೦೧೪–೧೫ನೇ ಸಾಲಿನವರೆಗೆ ಸರ್ಕಾರದಿಂದ ಬಿಡುಗಡೆಯಾದ ಅನುದಾನ ಎಷ್ಟು (ವರ್ಷವಾರು, ಯೋಜನೆವಾರು ವಿವರ ನೀಡುವುದು) ;

(ಆ) ಸದರಿ ಸಾಲುಗಳಲ್ಲಿ ಖರ್ಚಾದ ಮೊತ್ತ ಎಷ್ಟು ; ಖರ್ಚಾಗದೆ ಬಾಕಿ ಉಳಿದ ಮೊತ್ತ ಎಷ್ಟು (ವರ್ಷವಾರು, ಯೋಜನೆವಾರು ವಿವರ ನೀಡುವುದು) ;

(ಇ) ಅನುದಾನ ಮತ್ತು ಯೋಜನೆಗಳು ಬಾಕಿ ಉಳಿಯಲು ಕಾರಣವೇನು (ವಿವರ ನೀಡುವುದು) ?

## ನಿಖರ ಕೃಷಿ ಸಂಶೋಧನಾ ಮತ್ತು ಅಭಿವೃದ್ಧಿ ಕೇಂದ್ರ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :–**

೪೯ (೨೨೧) ಮಾನ್ಯ ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಯಚೂರಿನ ನಿಖರ ಕೃಷಿ ಸಂಶೋಧನಾ ಮತ್ತು ಅಭಿವೃದ್ಧಿ ಕೇಂದ್ರದ (Precision forming) ಉದ್ದೇಶಗಳು ಹಾಗೂ ಚಟುವಟಿಕೆಗಳೇನು (ವಿವರ ನೀಡುವುದು) ;

(ಆ) ಕಳೆದ ೫ ವರ್ಷಗಳಲ್ಲಿ ಈ ಸಂಸ್ಥೆಗೆ ಒದಗಿಸಿದ ಅನುದಾನ ಎಷ್ಟು ; ಖರ್ಚಾದ ಮೊತ್ತ ಎಷ್ಟು (ವರ್ಷವಾರು ಹಾಗೂ ಯೋಜನಾವಾರು ವಿವರ ನೀಡುವುದು) ;

(ಇ) ಈ ಸಂಸ್ಥೆಯಿಂದ ಕೃಷಿ ಕ್ಷೇತ್ರದಲ್ಲಿ ಆದ ಪ್ರಗತಿ ಹಾಗೂ ಈ ಭಾಗದ ರೈತರ ಏಳಿಗೆಗಾಗಿ ಸಂಸ್ಥೆಯ ಕೊಡುಗೆ ಏನು (ವಿವರ ನೀಡುವುದು) ;

(ಈ) ಹೈದರಾಬಾದ್ ಕರ್ನಾಟಕ ಪ್ರದೇಶದ ಹೊಸ ಜಿಲ್ಲೆಗಳಾದ ಕೊಪ್ಪಳ, ಯಾದಗಿರಿ ಬಳ್ಳಾರಿ ಹಾಗೂ ಬೀದರ ಜಿಲ್ಲೆಗಳ ಈ ಸಂಸ್ಥೆ ಪ್ರಾರಂಭಿಸಲು ಸರ್ಕಾರ ಮುಂದಾಗುವುದೆ (ಈ ನಿಟ್ಟಿನಲ್ಲಿ ಆದ ಪ್ರಗತಿಯ ಮಾಹಿತಿ ನೀಡುವುದು) ?

## ಬೆಳೆ ವಿಮೆ ಫಲಾನುಭವಿಗಳು

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :–**

೫೦ (೨೨೩) ಮಾನ್ಯ ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹೈದರಾಬಾದ್ ಕರ್ನಾಟಕ ರೈತರಿಗೆ ಇತ್ತೀಚಿನ ವರ್ಷಗಳಲ್ಲಿ ಹಲವಾರು ನೈಸರ್ಗಿಕ ವಿಪತ್ತು ಅಂದರೆ ಆಲಿಕಲ್ಲು, ಮಳೆ, ಬರ,



ಪ್ರವಾಹಗಳಿಂದ ತತ್ತಿರಿಸಿ ಹೋಗಿ ಕಂಗಾಲಾಗಿದ್ದು, ಈ ಭಾಗದ ರೈತರಿಗೆ ಯಾವುದೇ ಬೆಳೆ ವಿಮೆ ಸಿಗದೆ ಇರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಕಳೆದ ನಾಲ್ಕು ವರ್ಷ (೨೦೧೧–೧೨, ೨೦೧೨–೧೩, ೨೦೧೩–೧೪, ೨೦೧೪–೧೫ ಸಾಲು) ಗಳಲ್ಲಿ "ಬೆಳೆ ವಿಮೆ" ಫಲಾನುಭವಿ ರೈತರ ಸಂಖ್ಯೆ ಎಷ್ಟು ; ಬೆಳೆ ವಿಮೆ ಕಂತು ಶೇಕಡಾ ಎಷ್ಟು ; ವಿಮೆ ಕಂತು ಕಟ್ಟಿದ ರೈತರ ಸಂಖ್ಯೆ ಹಾಗೂ ಮೊತ್ತ ಎಷ್ಟು ; (ತಾಲ್ಲೂಕುವಾರು, ವರ್ಷವಾರು ಪ್ರತ್ಯೇಕ ಮಾಹಿತಿ ನೀಡುವುದು) ;

(ಇ) ಸಂಕಷ್ಟ ಕಾಲದಲ್ಲಿ ಈ ಭಾಗದ ರೈತರ ಸಹಾಯಕ್ಕೆ ಸರ್ಕಾರ ಮುಂದಾಗುವುದೇ ಇದ್ದರೆ ಬೆಳೆ ವಿಮೆ ವಿತರಣೆಯಲ್ಲಿ ಆಗುವ ವಿಳಂಬ ಹಾಗೂ ವಿತರಣೆ ಆಗುವುದನ್ನು ತಡೆಯಲು ಸರ್ಕಾರದ ಮುಂದಿರುವ ಕ್ರಮಗಳೇನು ?

## ವಕ್ಫ್ ಆಸ್ತಿಗಳು

**ಶ್ರೀ ಗೋ. ಮಧುಸೂದನ್ (ಪದವೀಧರರ ಕ್ಷೇತ್ರ) :–**

೫೧ (೨೨೭) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲ್ಬುರ್ಗಿ ನಗರದ ಮಧ್ಯಭಾಗದಲ್ಲಿನ ಬಡೇಪುರಕ್ಕೆ ಸೇರಿದ ಸರ್ವೆ ನಂ. ೧೨ ರ ೮.೩೪ ಎಕರೆ ಭೂಮಿಯು ಖ್ವಾಜಾ ಬಂದೇ ನವಾಜ್ ದರ್ಗಾಕ್ಕೆ ಸೇರಿದ ವಕ್ಫ್ ಆಸ್ತಿಯಾಗಿದ್ದು, ಮತ್ತು ಕಲ್ಬುರ್ಗಿ ನಗರದ ಒಕ್ಕಲಗೇರದ ಸರ್ವೆ ನಂ. ೧೩ ರಲ್ಲಿನ ೨ ಎಕರೆ

ಪ್ರದೇಶವು ಹಜರತ್ ಅಬೇರ್ ನೈಮಿಚೈನಯಾ ದರ್ಗಾಕ್ಕೆ ಸೇರಿದ ವಕ್ಫ್ ಆಸ್ತಿಯಾಗಿದ್ದು ಹಾಗೂ ಕಲ್ಬುರ್ಗಿಯ ಬ್ರಹ್ಮಪುರ ಗ್ರಾಮದ ಸರ್ವೆ ನಂ. ೩೩/೧, ೩೩/೨, ೩೩/೩, ೩೩/೪, ೩೩/೫ ಜಮೀನು ಸಹಾ ಖ್ವಾಜಾ ಬಂದೇ ನವಾಜ್ ದರ್ಗಾಕ್ಕೆ ಸೇರಿರುತ್ತದೆ. ಈ ಮೇಲ್ಕಂಡ ಸರ್ವೆ ನಂ. ಗಳಲ್ಲಿ ಒತ್ತುವರಿಯಾಗಿರುವುದು ನಿಜವೇ ; ಹಾಗಿದ್ದಲ್ಲಿ, ಅತಿಕ್ರಮಣ ಮಾಡಿರುವವರ ಹೆಸರು, ತಂದೆ ಅಥವಾ ಗಂಡನ ಹೆಸರು, ವಿಳಾಸ ಮತ್ತಿತರ ಪೂರ್ಣ ವಿವರ ನೀಡುವುದು (ಗ್ರಾಮವಾರು ಸರ್ವೆ ನಂಬರ್‌ವಾರು ನೀಡುವುದು) ;

(ಆ) ಈ ಆಸ್ತಿಯನ್ನು ವಕ್ಫ್ ಮಂಡಳಿಗೆ ವಾಪಸ್ಸು ಪಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಇ) ಯಾವ ಯಾವ ನ್ಯಾಯಾಲಯಗಳಲ್ಲಿ ಈ ಬಗ್ಗೆ ಕಟ್ಲೆ ಹೂಡಲಾಗಿದೆ (ಪ್ರಕರಣವಾರು ವಿವರ ನೀಡುವುದು) ?

## ಕೃಷಿ ಉತ್ಪನ್ನಗಳು

**ಶ್ರೀ ಗೋ. ಮಧುಸೂದನ್ (ಪದವೀಧರರ ಕ್ಷೇತ್ರ) :–**

೫೨ (೨೨೮) ಮಾನ್ಯ ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಈ ವರ್ಷ ಉತ್ಪತ್ತಿಯಾಗಿರುವ ಕೃಷಿ ಉತ್ಪನ್ನಗಳ ಬೆಳೆವಾರು, ಜಿಲ್ಲಾವಾರು ವಿವರ ನೀಡುವುದು ; ಪ್ರತಿಯೊಂದು ಬೆಳೆಯ ವಿಷಯದಲ್ಲಿ ಅಪೇಕ್ಷಿತ ಗುರಿ ಸಾಧನೆಯಾಗಿದೆಯೇ (ಜಿಲ್ಲಾವಾರು ವಿವರ ನೀಡುವುದು) ;

(ಆ) ಯಾವ ಯಾವ ಬೆಳೆಗಳಿಗೆ ಬೆಲೆ ಕುಸಿತದ ತೀವ್ರ ಪರಿಣಾಮ ಉಂಟಾಗಿದೆ ; ಈ ಎಲ್ಲ ಬೆಳೆಗಳ ಅಂದಾಜು ಸರಾಸರಿ ಬೆಲೆ



ಮತ್ತು ಕುಸಿತ ಕಂಡಿರುವ ಕನಿಷ್ಠ ಬೆಲೆ ಎಷ್ಟು (ಜಿಲ್ಲಾವಾರು, ಬೆಳೆವಾರು ವಿವರ ನೀಡುವುದು) ;

(ಇ) ಮಳೆಯ ಕೊರತೆ ಉಂಟಾಗಿ ಮತ್ತು ಅಧಿಕ ಮಳೆಯಿಂದಾಗಿ ಹಾಗೂ ಕಳಪೆ ಬೀಜದಿಂದಾಗಿ ತೀವ್ರ ನಷ್ಟ ಅನುಭವಿಸಿರುವ ಪ್ರದೇಶಗಳು ಯಾವುವು (ಜಿಲ್ಲಾವಾರು, ಬೆಳೆವಾರು ವಿವರ ನೀಡುವುದು) ;

(ಈ) ಈ ಎಲ್ಲಾ ಸಮಸ್ಯೆಗಳಿಗೆ ಸರ್ಕಾರವು ಯಾವ ಪರಿಹಾರ ಕಾರ್ಯ ಕೈಗೊಂಡಿದೆ (ವಿವರ ನೀಡುವುದು) ?

## ಸಕ್ಕರೆ ಕಾರ್ಖಾನೆಗಳು ಮತ್ತು ಕಬ್ಬು ಬೆಳೆಗಾರರು

**ಶ್ರೀ ಗೋ. ಮಧುಸೂದನ್ (ಪದವೀಧರರ ಕ್ಷೇತ್ರ) :–**

೫೩ (೨೨೪) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ವರ್ಷ ಸರ್ಕಾರದ ತೀರ್ಮಾನಿಸಿದಂತೆ, ೧ ಟನ್ ಕಬ್ಬಿಗೆ ರೂ. ೨೫೦೦ ನ್ನು ರಾಜ್ಯದ ಯಾವ ಯಾವ ಸಕ್ಕರೆ ಕಾರ್ಖಾನೆ ರೈತರಿಗೆ ನೀಡಿದೆ ; ಕಾರ್ಖಾನೆವಾರು ವಿವರ ನೀಡುವುದು ಮತ್ತು ಈ ಎಲ್ಲಾ ಕಾರ್ಖಾನೆಗಳಲ್ಲಿ ಬೆಲೆ ನಿಗದಿಯ ನಂತರದಲ್ಲಿ ಸರಬರಾಜಾಗಿರುವ ಕಬ್ಬುಗಳ ಪ್ರಮಾಣವನ್ನು ಕಾರ್ಖಾನೆವಾರು ನೀಡುವುದು ;

(ಆ) ಕೇಂದ್ರ ಸರ್ಕಾರದಿಂದ ಕಳೆದ ವರ್ಷ ನೀಡಿರುವ ವಿಶೇಷ ಸಾಲ ಅಥವಾ ಅನುದಾನ ಸೌಲಭ್ಯ ಪಡೆದ ರಾಜ್ಯದ ಸಕ್ಕರೆ ಕಾರ್ಖಾನೆಗಳ ವಿವರ ನೀಡುವುದು ;

(ಇ) ಕಳೆದ ವರ್ಷ ರಾಜ್ಯ ಸರ್ಕಾರ ಕಬ್ಬು ಬೆಳೆಗಾರರಿಗೆ ಪ್ರತಿ ಟನ್ನಿಗೆ ನೀಡಿದ ವಿಶೇಷ ಅನುದಾನದ ಮೊತ್ತ ಎಷ್ಟು ; ವಿಶೇಷ

ಅನುದಾನದಲ್ಲಿ ಯಾವ ಯಾವ ಕಾರ್ಖಾನೆಗಳ ಮೂಲಕ ಎಷ್ಟೆಷ್ಟು ಮೊತ್ತವನ್ನು ರೈತರಿಗೆ ನೀಡಲಾಗಿದೆ (ಕಾರ್ಖಾನೆವಾರು ವಿವರ ನೀಡುವುದು) ?

## ತೋಟಗಾರಿಕೆ ವಿಶ್ವವಿದ್ಯಾನಿಲಯಗಳು

**ಶ್ರೀ ಗೋ. ಮಧುಸೂದನ್ (ಪದವೀಧರರ ಕ್ಷೇತ್ರ) :–**

೫೪ (೨೨೬) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ತೋಟಗಾರಿಕೆ ವಿಶ್ವವಿದ್ಯಾಲಯಗಳು ಎಷ್ಟು ; ಈ ವಿಶ್ವವಿದ್ಯಾಲಯಗಳಲ್ಲಿ ತೆರೆಯಲಾಗಿರುವ ಡಿಪ್ಲೊಮಾ, ಪದವಿ ಮತ್ತು ಸ್ನಾತಕೋತ್ತರ ಪದವಿ, ಸಂಶೋಧನೆ ವಿಭಾಗಗಳ ವಿವರ ನೀಡುವುದು ;

(ಆ) ಇಲ್ಲಿನ ಬೋಧಕ, ಬೋಧಕೇತರ ಸಿಬ್ಬಂದಿಗಳ ವಿವರ, ಖಾಲಿಯಿರುವ ಹುದ್ದೆಗಳು ಎಷ್ಟು (ವಿವರ ನೀಡುವುದು) ;

(ಇ) ಈ ವಿಶ್ವವಿದ್ಯಾಲಯಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು (ವಿಶ್ವವಿದ್ಯಾಲಯವಾರು ವಿವರ ನೀಡುವುದು) ?

## ಕಬ್ಬಿನ ಬೆಲೆ

**ಶ್ರೀ ರಘುನಾಥರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೫೫ (೨೩೦) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸರ್ಕಾರ ೨೦೧೩–೧೪, ೨೦೧೪–೧೫ನೇ ಸಾಲಿನಲ್ಲಿ ಪ್ರತಿ ಟನ್ ಕಬ್ಬಿಗೆ ಘೋಷಣೆ ಮಾಡಿದ ದರ ಎಷ್ಟು ;



(ಆ) ಸರ್ಕಾರದ ಆದೇಶವನ್ನು ಸಕ್ಕರೆ ಕಾರ್ಖಾನೆಗಳು ಪಾಲಿಸಿವೆಯೇ ;

(ಇ) ಕಾರ್ಖಾನೆಗಳು ಪ್ರತಿ ಟನ್ ಕಬ್ಬಿಗೆ ರೂ. ೨೫೦೦/– ಹಾಗೂ ಸರ್ಕಾರವು ಪ್ರತಿ ಟನ್‌ಗೆ ರೂ. ೧೫೦/–ನ್ನು ಘೋಷಿಸಿ ನೋಟೀಸ್ ಜಾರಿ ಮಾಡಿದ ನಂತರವೂ ನಿಯಮ ಪಾಲಿಸದ ಕಾರ್ಖಾನೆಗಳು ಯಾವುವು, ಅವುಗಳ ಮೇಲೆ ಯಾವ ಕ್ರಮ ಜರುಗಿಸಲಾಗಿದೆ ;

(ಈ) ರೈತರ ಹಿತ ರಕ್ಷಣೆ ಕಾಪಾಡುವಲ್ಲಿ ಸರ್ಕಾರ ವಿಫಲವಾಗಿದೆ ಎಂಬ ಭಾವನೆ ರೈತರಲ್ಲಿ ಮೂಡಲು ಇಲಾಖೆಯ ನಿರ್ಲಕ್ಷ್ಯ ಕಾರಣವಲ್ಲವೇ (ಸಂಪೂರ್ಣ ಮಾಹಿತಿ ನೀಡುವುದು) ?

## ಬೆಸ್ಕಾಂನಿಂದ ವಿದ್ಯುತ್ ಸರಬರಾಜು

**ಶ್ರೀ ರಘುನಾಥರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೫೬ (೨೩೨) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ಜಿಲ್ಲೆಗೆ ಬೆಸ್ಕಾಂ ವತಿಯಿಂದ ಸರಬರಾಜು ಮಾಡಲಾಗುತ್ತಿರುವ ವಿದ್ಯುತ್ ಪ್ರಮಾಣ ಎಷ್ಟು ;

(ಆ) ಹಾಗಿದ್ದಲ್ಲಿ, ಕಳೆದ ಎರಡು ವರ್ಷಗಳಿಂದ ಒದಗಿಸುತ್ತಿರುವ ಪ್ರಮಾಣ ಎಷ್ಟು (ತಾಲ್ಲೂಕುವಾರು ವಿವರ ನೀಡುವುದು) ;

(ಇ) ಹಾಗಿದ್ದಲ್ಲಿ, ಪ್ರಸಕ್ತ ಸಾಲಿನಲ್ಲಿ ಸರಬರಾಜು ಮಾಡಲಾಗುತ್ತಿರುವ ವಿದ್ಯುತ್ ಪ್ರಮಾಣವು ಕ್ಷೀಣಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಹಾಗಿದ್ದಲ್ಲಿ, ವಿದ್ಯುತ್ ಪ್ರಮಾಣವನ್ನು ಏರಿಕೆ ಮಾಡಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು ;

(ಉ) ಜಿಲ್ಲೆಗೆ ಬೆಸ್ಕಾಂ ವತಿಯಿಂದ ಸರಿಯಾಗಿ ವಿದ್ಯುತ್ ಸರಬರಾಜು ಮಾಡಲಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ (ವಿವರ ನೀಡುವುದು) ?

## ರೈತ ಸಮುದಾಯಕ್ಕೆ ಕಳಪೆ ಬೀಜ ಪೂರೈಕೆ

**ಶ್ರೀ ರಘುನಾಥರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೫೭ (೨೩೩) ಮಾನ್ಯ ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ಜಿಲ್ಲೆಯಲ್ಲಿ ಕಳೆದ ಎರಡು ವರ್ಷಗಳಲ್ಲಿ ದಾಖಲಾಗಿರುವ ಕಳಪೆ ಬೀಜ ಪೂರೈಕೆ ಪ್ರಕರಣಗಳು ಮತ್ತು ಅವುಗಳಿಂದ ಉಂಟಾದ ಅಂದಾಜು ನಷ್ಟದ ಪ್ರಮಾಣವೆಷ್ಟು (ತಾಲ್ಲೂಕುವಾರು ವಿವರ ನೀಡುವುದು) ;

(ಆ) ಅಮಾಯಕ ರೈತಾಪಿ ಜನರು ಕಳಪೆ ಬೀಜವನ್ನು ತಮ್ಮ ಕೃಷಿ ಕಾರ್ಯ ಚಟುವಟಿಕೆಗಳಿಗೆ ಬಳಸುವ ಮೂಲಕ ಉಂಟಾದ ನಷ್ಟದ ಕಾರಣ ರೈತರ ಆತ್ಮಹತ್ಯೆ ಪ್ರಕರಣಗಳು ಮತ್ತು ಈ ಅವ್ಯವಹಾರ ಪ್ರಕರಣವು ಹೆಚ್ಚಿನ ಪ್ರಭಾವ ಬೀರಿದ ತಾಲ್ಲೂಕುಗಳು, ಅಲ್ಲಿಗೆ ಸರ್ಕಾರವು ಪರಿಸ್ಥಿತಿಯನ್ನು ನಿಭಾಯಿಸಲು ಕೈಗೊಂಡ ಆರ್ಥಿಕ ಸಾಂತ್ವನದ ಕ್ರಮಗಳೇನು ;

(ಇ) ಈ ಸಂಕಷ್ಟ ಪರಿಸ್ಥಿತಿಯನ್ನು ಹೋಗಲಾಡಿಸುವ ದಿಶೆಯಲ್ಲಿ ಕೇಂದ್ರ ಸರ್ಕಾರದವರು ನೀಡಿದ ಆರ್ಥಿಕ ನೆರವಿನ ಕುರಿತಾದ ವಿವರಗಳು, ಅದರಲ್ಲಿ ಬಳಕೆಯಾದ ಮತ್ತು ಬಳಕೆ ಮಾಡದೆ ಉಳಿದ ಹಣದ ಮೊತ್ತ ಹಾಗೂ ಯಾವ ಕಾರಣಕ್ಕಾಗಿ ಆರ್ಥಿಕ ನೆರವನ್ನು ಬಳಸಲಾಗಿಲ್ಲ ಎಂಬುದರ ಕುರಿತು ಸರ್ಕಾರದ ಸ್ಪಷ್ಟೀಕರಣಗಳೇನು ;



(ಈ) ಹಾಗಿದ್ದಲ್ಲಿ, ಇದಕ್ಕೆ ಕಾರಣಕರ್ತರಾದವರ ಮೇಲೆ ಸರ್ಕಾರದ ಶಿಸ್ತಿನ ಕ್ರಮಗಳೇನು ಉಳಿದ ಹಣವನ್ನು ಯಾವ ಯಾವ ಉದ್ದೇಶಕ್ಕಾಗಿ ಬಳಸಲಾಯಿತು (ಮಾಹಿತಿ ನೀಡುವುದು) ?

## ತೋಟಗಾರಿಕೆ ಇಲಾಖೆಯಲ್ಲಿನ ಕಾರ್ಯಕ್ರಮಗಳು

**ಶ್ರೀ ರಘುನಾಥರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೫೮ (೨೩೧) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ಜಿಲ್ಲೆಯ ಆರು ವಿಧಾನ ಸಭಾ ಕ್ಷೇತ್ರಗಳ ತೋಟಗಾರಿಕೆ ಇಲಾಖೆಗೆ ಸೇರಿದ ಜಮೀನು ಎಷ್ಟು (ತಾಲ್ಲೂಕುವಾರು ವಿವರ ನೀಡುವುದು) ;

(ಆ) ಈ ಎಲ್ಲಾ ಕ್ಷೇತ್ರಗಳಲ್ಲಿ ಯಾವ ಯಾವ ತೋಟಗಾರಿಕೆ ಬೆಳೆಗಳನ್ನು ಎಲ್ಲೆಲ್ಲಿ ಬೆಳೆಯಲಾಗುತ್ತಿದೆ ;

(ಇ) ತೋಟಗಾರಿಕೆ ಬೆಳೆಯಿಂದ ರೈತರಿಗೆ ಅನುಕೂಲವಾಗುವ ರೀತಿಯಲ್ಲಿ ಏನೇನು ಕ್ರಮ ಕೈಗೊಳ್ಳಲಾಗಿದೆ ;

(ಈ) ಜಿಲ್ಲೆಯ ಎಲ್ಲಾ ವಿಧಾನ ಸಭಾ ಕ್ಷೇತ್ರಗಳಲ್ಲಿ ಒಟ್ಟು ಎಷ್ಟು ಫಾರಂ ಹೌಸ್‌ಗಳಿಗೆ ೨೦೧೨ ರಿಂದ ೨೦೧೫ನೇ ಸಾಲಿನವರೆಗೆ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ (ವಿವರ ನೀಡುವುದು) ?

## ವಕ್ಫ ಆಸ್ತಿ ಅತಿಕ್ರಮಣ

**ಶ್ರೀ ರಘುನಾಥರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೫೯ (೨೨೯) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ಜಿಲ್ಲೆಯಲ್ಲಿ ವಕ್ಫ್ ಮಂಡಳಿಗೆ ಸೇರಿದ ಒಟ್ಟು ಎಷ್ಟು ಎಕರೆ ಆಸ್ತಿಗಳಿರುತ್ತವೆ ; ಸರ್ವೆ ನಂಬರ್, ಪ್ರದೇಶ ಇತ್ಯಾದಿ ಸಂಪೂರ್ಣ ವಿವರ ಒದಗಿಸುವುದು (ತಾಲ್ಲೂಕುವಾರು) ;

(ಆ) ಕಳೆದ ೧೦ ವರ್ಷಗಳಲ್ಲಿ ಎಷ್ಟು ವಕ್ಫ್ ಆಸ್ತಿಗಳನ್ನು ಲೀಸ್ ಇತ್ಯಾದಿ ಆಧಾರದ ಮೇಲೆ ನೀಡಲಾಗಿದೆ (ಸಂಪೂರ್ಣ ವಿವರ ಒದಗಿಸುವುದು) ;

(ಇ) ವಕ್ಫ್ ಆಸ್ತಿಗಳನ್ನು ಖಾಸಗಿಯವರು ಆಕ್ರಮಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಕಳೆದ ೧೦ ವರ್ಷಗಳಲ್ಲಿ ಎಷ್ಟು ವಕ್ಫ್ ಆಸ್ತಿ ಅತಿಕ್ರಮಣ ಸರ್ಕಾರದ ಗಮನಕ್ಕೆ ಬಂದಿದ್ದು ಅದನ್ನು ತೆರವುಗೊಳಿಸಲು ತೆಗೆದುಕೊಂಡ ಕ್ರಮಗಳೇನು (ತಾಲ್ಲೂಕುವಾರು ವಿವರ ನೀಡುವುದು) ?

## ಆಲೂಗಡ್ಡೆ ಬೆಳೆ ನಾಶಕ್ಕೆ ಪರಿಹಾರ

**ಶ್ರೀ ಪಟೇಲ್ ಶಿವರಾಂ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೬೦ (೨೩೪) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹಾಸನ ಜಿಲ್ಲೆಯಲ್ಲಿ ಬಿತ್ತನೆಯಾದ ಆಲೂಗಡ್ಡೆ ಬೆಳೆಯ ಪ್ರಮಾಣವೆಷ್ಟು ;



(ಆ) ಅಂಗಮಾರಿ ರೋಗದಿಂದ ನಷ್ಟವಾಗಿರುವ ಪ್ರಮಾಣವೆಷ್ಟು ;

(ಇ) ಕಳೆದ ಎಂಟು ವರ್ಷಗಳಿಂದ ಜಿಲ್ಲೆಯ ರೈತರು ಅಂಗಮಾರಿ ರೋಗ, ಅತೀವೃಷ್ಟಿ, ಅನಾವೃಷ್ಟಿಗಳಿಂದ ನಷ್ಟ ಅನುಭವಿಸುತ್ತಿದ್ದು ಇದಕ್ಕೆ ಪರಿಹಾರ ನೀಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಈ) ಆಲೂಗಡ್ಡೆಗೆ ತಗಲುವ ಅಂಗಮಾರಿ ರೋಗದ ನಿವಾರಣೆಗೆ ಸರ್ಕಾರ ಕೈಗೊಂಡಿರುವ ಶಾಶ್ವತ ಕ್ರಮಗಳೇನು ?

## ಅಧಿಕೃತ ಸಂಸ್ಥೆಗಳಿಂದ ಉತ್ಪಾದಿಸುತ್ತಿರುವ ಬೀಜ ಮಾರಾಟ

**ಶ್ರೀ ಪಟೇಲ್ ಶಿವರಾಂ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೬೧ (೨೩೬) ಮಾನ್ಯ ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯ ಸರ್ಕಾರದ ಅಧಿಕೃತ ಸಂಸ್ಥೆಗಳಾದ ಕರ್ನಾಟಕ ರಾಜ್ಯ ಬೀಜ ನಿಗಮ ಮತ್ತು ಕೆಒಎಫ್‌ಗಳಿಂದ ಉತ್ಪಾದನೆ ಮಾಡುತ್ತಿರುವ ಬೀಜಗಳಾವುವು ; ರಾಜ್ಯದಲ್ಲಿ ಬೇಕಾಗಿರುವ ಬೀಜಗಳ ಪ್ರಮಾಣವೆಷ್ಟು ;

(ಆ) ಸದರಿ ಅಧಿಕೃತ ಸಂಸ್ಥೆಗಳು ಎಷ್ಟು ಪ್ರಮಾಣದಲ್ಲಿ ವಿವಿಧ ಬೀಜಗಳನ್ನು ಉತ್ಪಾದನೆ ಮಾಡುತ್ತಿವೆ ;

(ಇ) ಸರ್ಕಾರಿ ಅಧಿಕೃತ ಸಂಸ್ಥೆಗಳು ಉತ್ಪಾದಿಸುವ ಬೀಜಗಳನ್ನು ಪ್ರಥಮ ಆದ್ಯತೆಯಾಗಿ ರೈತರಿಗೆ ನೀಡಲಾಗುತ್ತಿದೆಯೇ ;

(ಈ) ಪ್ರಸಕ್ತ ಹಾಗೂ ಕಳೆದ ಸಾಲುಗಳಲ್ಲಿ ಸರ್ಕಾರದಿಂದ ಹಂಚಿಕೆಯಾಗಿರುವ ಬಿತ್ತನೆ ಬೀಜವೆಷ್ಟು ; ಈ ಪೈಕಿ ಅಧಿಕೃತ ಸಂಸ್ಥೆಗಳಿಂದ ಹಂಚಿಕೆಯಾದ ಬೀಜಗಳ ಪ್ರಮಾಣವೆಷ್ಟು ;

(ಉ) ಪ್ರಸಕ್ತ ಸಾಲಿನಲ್ಲಿ ಅಧಿಕೃತ ಸಂಸ್ಥೆಗಳಲ್ಲಿ ಮಾರಾಟವಾಗದೆ ಉಳಿದಿರುವ ಕಡಲೇ ಬಿತ್ತನೆ ಬೀಜವೆಷ್ಟು ; ಹಾಗೆ ಉಳಿಯಲು ಕಾರಣವೇನು ; ಇದಕ್ಕೆ ಕೈಗೊಂಡಿರುವ ಕ್ರಮಗಳೇನು ?

## ಸಾರ್ವಜನಿಕ ಶೌಚಾಲಯ ಕೊರತೆ

**ಶ್ರೀ ಪಟೇಲ್ ಶಿವರಾಂ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೬೨ (೨೩೭) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹಾಸನ ನಗರ ಜನಸಂಖ್ಯೆ ಮತ್ತು ಪ್ರತಿದಿನ ನಗರಕ್ಕೆ ಆಗಮಿಸುವ ಜನರಿಗೆ ಅನುಗುಣವಾಗಿ ಕನಿಷ್ಠ ಎಷ್ಟು ಸಾರ್ವಜನಿಕ ಶೌಚಾಲಯಗಳ ಅಗತ್ಯತೆ ಇರುತ್ತದೆ ;

(ಆ) ನಗರದಲ್ಲಿ ಹಾಲಿ ಇರುವ ಸಾರ್ವಜನಿಕ ಶೌಚಾಲಯಗಳೆಷ್ಟು ;

(ಇ) ಸರ್ಕಾರಿ ವಿಜ್ಞಾನ ಕಾಲೇಜು ಬಳಿ ಬಿಟ್ಟರೆ ನಗರದ ಜನನಿಬಿಡ ಸ್ಥಳಗಳಲ್ಲಿ ಶೌಚಾಲಯಗಳನ್ನು ನಿರ್ಮಿಸದಿರುವುದಕ್ಕೆ ಕಾರಣಗಳೇನು ;

(ಈ) ನಗರದ ಹೃದಯ ಭಾಗಗಳಲ್ಲಿ ಶೌಚಾಲಯ ನಿರ್ಮಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಪೌರ ಕಾರ್ಮಿಕರಿಗೆ ಒದಗಿಸಬೇಕಾದ ಸೌಲಭ್ಯ

**ಶ್ರೀ ಪಟೇಲ್ ಶಿವರಾಂ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೬೩ (೨೩೫) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹಾಸನ ಜಿಲ್ಲೆ, ಅರಕಲಗೂಡು ತಾಲ್ಲೂಕಿನ ಪುರಾತನ ಪ್ರವಾಸ ತಾಣವಾಗಿರುವ ರಾಮನಾಥಪುರ ಗ್ರಾಮದಲ್ಲಿರುವ ಪೌರಕಾರ್ಮಿಕರೆಷ್ಟು ; ಇವರಿಗೆ ಮೂಲಭೂತ ಸೌಲಭ್ಯ ಮತ್ತು ಪಡಿತರ ಚೀಟಿಗಳನ್ನು ಒದಗಿಸಲಾಗಿದೆಯೆ ;



(ಆ) ಈ ಪೌರ ಕಾರ್ಮಿಕರು ವಾಸಿಸುವ ಮನೆಗಳಿಗೆ ಆಗುತ್ತಿರುವ ತೊಂದರೆ ನಿವಾರಿಸಿ ಎಲ್ಲಾ ಮೂಲ ಸೌಲಭ್ಯಗಳನ್ನು ನೀಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಇ) ಈ ಪೌರ ಕಾರ್ಮಿಕರು ವಾಸಿಸುವ ಮನೆಗಳಿಗೆ ಹಕ್ಕುಪತ್ರಗಳನ್ನು ನೀಡಲು ಮತ್ತು ಉದ್ಯೋಗ ಅರಸಿ ಗುಳೆ ಹೋಗುವುದನ್ನು ತಪ್ಪಿಸಲು ಉದ್ಯೋಗ ಖಾತ್ರಿ ಯೋಜನೆಯಡಿ ಉದ್ಯೋಗ ನೀಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ರಸ್ತೆ ಬದಿಗಳಲ್ಲಿ ನಿಯಮಬಾಹಿರವಾಗಿ ಮಾಂಸ ಮಾರಾಟ

**ಶ್ರೀ ಸಿ.ಹೆಚ್. ವಿಜಯ ಶಂಕರ (ವಿಧಾನಸಭೆಯಿಂದ ಚುನಾಯಿತರಾದವರು) :–**

೬೪ (೨೩೮) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಕೆಲವು ಭಾಗದ ರಸ್ತೆಬದಿಯಲ್ಲಿ ಸಾರ್ವಜನಿಕವಾಗಿ ಮತ್ತು ನಿಯಮಬಾಹಿರವಾಗಿ ಕುರಿ ಮತ್ತು ಮೇಕೆ ಹತ್ಯೆ ಮಾಡಿ ಮಾಂಸ ಮಾರಾಟದ ವ್ಯವಹಾರ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಈ ರೀತಿ ಮಾಂಸ ಮಾರಾಟ ಮಾಡುವ ವ್ಯವಸ್ಥೆಯಿಂದ ಸದರಿ ರಸ್ತೆಗಳಲ್ಲಿ ಓಡಾಡುವ ಮಕ್ಕಳಿಗೆ, ಮಹಿಳೆಯರಿಗೆ ಮತ್ತು ಸಸ್ಯಹಾರಿಗಳಿಗೆ ಮುಜಗರವಾಗುವುದಿಲ್ಲವೇ ;

(ಇ) ಸ್ಥಳೀಯ ಸಂಸ್ಥೆಗಳ ಅನುಮತಿ ಪಡೆಯದೆ ಈ ರೀತಿಯ ಮಾಂಸ ಮಾರಾಟ ದಂಧೆಯನ್ನು ತಡೆಯಲು ಸರ್ಕಾರ ತೆಗೆದುಕೊಳ್ಳಬಹುದಾದ ಕ್ರಮಗಳೇನು ;

(ಈ) ಮಾಂಸ ಮಾರಾಟದ ನಿಯಮಗಳನ್ನು ಮತ್ತು ಅದಕ್ಕನ್ವಯಿಸುವ ಕಾನೂನುಗಳನ್ನು ಕಡ್ಡಾಯವಾಗಿ ಪಾಲಿಸದ ವ್ಯಕ್ತಿಗಳು ಮತ್ತು ಸಂಬಂಧಿಸಿದ ಅಧಿಕಾರಿಗಳ ಮೇಲೆ ಸರ್ಕಾರ ಇದುವರೆವಿಗೂ ಕೈಗೊಂಡ ಕ್ರಮಗಳೇನು (ಕ್ರಮ ಜರುಗಿಸಿದ್ದರೆ ವಿವರಗಳನ್ನು ಒದಗಿಸುವುದು) ?

## ಹೆದ್ದಾರಿ ಹಾದುಹೋಗುವ ನಗರಗಳಲ್ಲಿ ಮೇಲ್ಸೇತುವೆ ನಿರ್ಮಾಣ

**ಶ್ರೀ ಬಿ. ರಾಮಕೃಷ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೬೫ (೨೪೦) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು–ಮೈಸೂರು ಹೆದ್ದಾರಿ ಹಾದು ಹೋಗುವ ನಗರಗಳಲ್ಲಿ ವಾಹನಗಳ ದಟ್ಟಣೆಯನ್ನು ತಪ್ಪಿಸಲು ಮೇಲ್ಸೇತುವೆ ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;

(ಆ) ಹಾಗಿದ್ದಲ್ಲಿ, ಮೇಲ್ಸೇತುವೆ ನಿರ್ಮಾಣ ಮಾಡಲು ಯಾವ ಯಾವ ನಗರಗಳನ್ನು ಗುರುತಿಸಲಾಗಿದೆ ;

(ಇ) ಈ ಯೋಜನೆಗೆ ಸರ್ಕಾರ ನಿಗದಿಪಡಿಸಿರುವ ಅನುದಾನವೆಷ್ಟು, ಇತ್ತೀಚಿನ ಪ್ರಗತಿಯ ವಿವರ ನೀಡುವುದು ;

(ಈ) ಹಾಗಿದ್ದಲ್ಲಿ, ಮೇಲ್ಸೇತುವೆ ನಿರ್ಮಿಸುವ ಕಾಮಗಾರಿಯನ್ನು ಯಾವ ಇಲಾಖೆ, ಏಜನ್ಸಿ/ಸಂಸ್ಥೆಗೆ ನೀಡಲಾಗಿದೆ ; ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು ; (ಪೂರ್ಣ ವಿವರ ನೀಡುವುದು) ?



## ರಸ್ತೆ ಅಭಿವೃದ್ಧಿಗೆ ಬಿಡುಗಡೆ ಮಾಡಿರುವ ಅನುದಾನ

**ಶ್ರೀ ಬಿ. ರಾಮಕೃಷ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೬೬ (೨೪೩) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೧೪–೧೫ನೇ ಸಾಲಿನಲ್ಲಿ ಲೋಕೋಪಯೋಗಿ ಇಲಾಖೆಯಿಂದ ಮಂಡ್ಯ ಜಿಲ್ಲೆಗೆ ಒದಗಿಸಲಾಗಿರುವ ಅನುದಾನವೆಷ್ಟು ; ಖರ್ಚು ಮಾಡಿರುವ ಮೊತ್ತವೆಷ್ಟು ; ಬಾಕಿಯಿರುವ ಮೊತ್ತದ ವಿವರಗಳನ್ನು ನೀಡುವುದು ; ಕಾಮಗಾರಿಗಳವಾರು ಮಾಹಿತಿ ನೀಡುವುದು ;

(ಆ) ಹಾಗಿದ್ದಲ್ಲಿ, ಈ ಅನುದಾನದಲ್ಲಿ ಕೈಗೊಳ್ಳಲಾಗಿರುವ ಅಭಿವೃದ್ಧಿ ಕಾಮಗಾರಿಗಳು ಯಾವುವು ; ಈ ಕಾಮಗಾರಿಗಳ ಇತ್ತೀಚಿನ ಪ್ರಗತಿಯೇನು (ತಾಲ್ಲೂಕುವಾರು ಮಾಹಿತಿ ನೀಡುವುದು) ?

## ಕೃಷಿ ಭಾಗ್ಯ ಯೋಜನೆ

**ಶ್ರೀ ಬಿ. ರಾಮಕೃಷ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೬೭ (೨೪೨) ಮಾನ್ಯ ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯ ಸರ್ಕಾರ ಕೃಷಿ ಭಾಗ್ಯ ಯೋಜನೆಯನ್ನು ಪ್ರಾರಂಭಿಸಿದೆಯೇ (ವಿವರಗಳನ್ನು ನೀಡುವುದು) ;

(ಆ) ಹಾಗಿದ್ದಲ್ಲಿ, ಈ ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಗಿದೆ ;

(ಇ) ಈ ಯೋಜನೆಯಡಿ ಒದಗಿಸಲಾಗುವ ಸೌಲಭ್ಯಗಳೇನು ; ಜಿಲ್ಲೆಯ ಎಷ್ಟು ಕೃಷಿನಿರತ ರೈತರನ್ನು ಫಲಾನುಭವಿಗಳನ್ನಾಗಿ ಆಯ್ಕೆ ಮಾಡಲಾಗಿದೆ ; ಇದಕ್ಕಾಗಿ ಅನುಸರಿಸಲಾಗಿರುವ ಮಾನದಂಡಗಳೇನು ;

(ಈ) ಮಂಡ್ಯ ಜಿಲ್ಲೆಯ ಎಷ್ಟು ರೈತರು ಈ ಯೋಜನೆಯಡಿ ಆಯ್ಕೆಯಾಗಿದ್ದಾರೆ (ತಾಲ್ಲೂಕುವಾರು ಮಾಹಿತಿ ನೀಡುವುದು) ?

## ರೈತರ ಪಂಪ್ ಸೆಟ್ಟುಗಳಿಗೆ ವಿದ್ಯುತ್ ಪೂರೈಕೆ

**ಶ್ರೀ ಇ. ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೬೮ (೨೪೪) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರೈತರ ಪಂಪ್‌ಸೆಟ್ಟುಗಳಿಗೆ ಪ್ರತಿನಿತ್ಯ ಅಡೆತಡೆಯಿಲ್ಲದೆ ಎಷ್ಟು ಘಂಟೆಗಳ ಕಾಲ ವಿದ್ಯುತ್ ಸರಬರಾಜು ಮಾಡಲಾಗುತ್ತದೆ ;

(ಆ) ರೈತರ ಪಂಪ್‌ಸೆಟ್ಟುಗಳಿಗೆ ೨೪ ಘಂಟೆಗಳ ಕಾಲ ವಿದ್ಯುತ್ ಪೂರೈಸಲು ಸರ್ಕಾರ ಕೈಗೊಂಡ ಕ್ರಮವೇನು ; ಹಾಗಿಲ್ಲದಿದ್ದಲ್ಲಿ ಕಾರಣವೇನು ?

## ರೈತರಿಗೆ ಸಹಕಾರ ಸಂಘಗಳಿಂದ ಸಾಲ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು) :–**

೬೯ (೨೬೧) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹಾವೇರಿ ಜಿಲ್ಲೆಯಲ್ಲಿರುವ ವ್ಯವಸಾಯ ಸಹಕಾರ ಸಂಘಗಳು (ವಿ.ಎಸ್.ಎಸ್) ಎಷ್ಟು ; ಈ ಸಹಕಾರ ಸಂಘಗಳಿಗೆ ಸಾಲಕ್ಕಾಗಿ ಬಂದ ಅರ್ಜಿಗಳು ಎಷ್ಟು (ತಾಲ್ಲೂಕುವಾರು ಮಾಹಿತಿ ಒದಗಿಸುವುದು) ;

(ಆ) ಹಾವೇರಿ ಜಿಲ್ಲೆಯಲ್ಲಿ ಪ್ರತಿ ಸಹಕಾರಿ ಸಂಘಗಳಿಂದ (ರೂ. ೨೫,೦೦೦ ರಿಂದ ೩.೦೦ ಲಕ್ಷ ರೂಪಾಯಿವರೆಗೆ) ಯಾವ ಯಾವ ರೈತರಿಗೆ ಎಷ್ಟೆಷ್ಟು ಸಾಲ ಕೊಟ್ಟಿರುತ್ತಾರೆ (ತಾಲ್ಲೂಕುವಾರು ಮಾಹಿತಿ ಒದಗಿಸುವುದು) ;



(ಇ) ಸಾಲಕ್ಕಾಗಿ ಬಂದ ಅರ್ಜಿಗಳಲ್ಲಿ ಸಾಲ ಸಿಗದೆ ಇರುವ ರೈತರ ಸಂಖ್ಯೆ ಎಷ್ಟು ;

(ಈ) ಈ ಹಿಂದೆ ಸಾಲ ಪಡೆದ ರೈತರಿಗೆ ಮಳೆ ಬಾರದೇ ಕಳಪೆ ಬೀಜದಿಂದ ಹಾನಿಯಾದ ರೈತರಿಗೆ ಸಾಲಮನ್ನಾ ಮಾಡಲು ಸರ್ಕಾರ ನಿರ್ಧರಿಸಿದೆಯೇ ;

(ಉ) ನಿರ್ಧರಿಸಿದ್ದರೆ, ಎಷ್ಟು ರೈತರಿಗೆ ಯಾವಾಗ ಎಷ್ಟೆಷ್ಟು ಸಾಲ ಮನ್ನಾ ಮಾಡಲಾಗುವುದು ?

## ಲಾಲ್‌ಬಹದ್ದೂರ್ ಶಾಸ್ತ್ರಿ ಮಾರುಕಟ್ಟೆ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು) :–**

೭೦ (೨೬೦) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹಾವೇರಿ ಜಿಲ್ಲೆಯ ಲಾಲ್‌ಬಹದ್ದೂರ್ ಶಾಸ್ತ್ರೀ ಮಾರುಕಟ್ಟೆಯು ಕಸದ ರಾಶಿಯಿಂದ ಕೂಡಿದ್ದು, ಚರಂಡಿ ನೀರಿನ ದುರ್ವಾಸನೆಯಿಂದಾಗಿ ಇಲ್ಲಿಯ ಜನತೆಯ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರುತ್ತಿದ್ದು ಹಾಗೂ ಜೂಜುಕೋರರ ತಾಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದರೆ, ಈ ಮಾರುಕಟ್ಟೆಯ ಮೂಲಭೂತ ಸೌಕರ್ಯದ ಬಗ್ಗೆ ಯಾವ ಕ್ರಮವನ್ನು ಕೈಗೊಳ್ಳಲಾಗುವುದು ; ಈ ಹಿಂದೆ ಮಾರುಕಟ್ಟೆಗೆ ಸರ್ಕಾರದಿಂದ ಬಿಡುಗಡೆಯಾದ ಅನುದಾನ ಎಷ್ಟು ;

(ಇ) ಅನುದಾನ ಬಿಡುಗಡೆಯಾಗಿದ್ದರೆ, ಈ ವಾರಾರುಕಟ್ಟೆಯ ಕಾಮಗಾರಿಯನ್ನು ಏಕೆ ಸ್ಥಗಿತಗೊಳಿಸಲಾಗಿದೆ (ಸಂಪೂರ್ಣವಾದ ಮಾಹಿತಿಯನ್ನು ಒದಗಿಸುವುದು) ?

## ರೈತರು ಕೃಷಿ ಚಟುವಟಿಕೆಗಳಿಂದ ದೂರ ಸರಿಯುತ್ತಿರುವುದು

**ಶ್ರೀ ವಿ. ಸೋಮಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೭೧ (೨೬೩) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಇತ್ತೀಚಿನ ವರ್ಷಗಳಲ್ಲಿ ರೈತರು ಕೃಷಿ ಚಟುವಟಿಕೆಗಳಿಂದ ವಿಮುಖವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಇದಕ್ಕೆ ಕಾರಣಗಳೇನು; ಕೃಷಿ ಚಟುವಟಿಕೆಗಳಿಂದ ರೈತರು ವಿಮುಖವಾಗುತ್ತಿರುವ ಪ್ರಮುಖ ಜಿಲ್ಲೆಗಳು ಯಾವುವು ;

(ಇ) ರೈತರಲ್ಲಿ ಜಾಗೃತಿ ಮೂಡಿಸಿ, ರೈತರನ್ನು ಕೃಷಿ ಚಟುವಟಿಕೆಗಳಲ್ಲಿ ಹೆಚ್ಚಾಗಿ ತೊಡಗಿಸಿಕೊಳ್ಳುವಂತೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಸದರಿ ಉದ್ದೇಶಕ್ಕೆ ಮೀಸಲಿಟ್ಟಿರುವ ಹಣ ಎಷ್ಟು ?

## ಕಲ್ಲಿದ್ದಲು ಸರಬರಾಜು

**ಶ್ರೀ ವಿ. ಸೋಮಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೭೨ (೨೬೨) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೆ.ಪಿ.ಸಿ.ಎಲ್. ವತಿಯಿಂದ ಕಲ್ಲಿದ್ದಲು ಸರಬರಾಜಿಗೆ ಎಷ್ಟು ಮಂದಿಗೆ ಅಥವಾ ಎಷ್ಟು ಕಂಪನಿಗಳಿಗೆ ಗುತ್ತಿಗೆ ನೀಡಲಾಗಿದೆ (ವಿವರ ನೀಡುವುದು) ;



(ಆ) ನೀಡಲಾದ ಗುತ್ತಿಗೆಯ ಮೌಲ್ಯವೆಷ್ಟು ; ಇದರಿಂದ ಎಷ್ಟು ಪ್ರಮಾಣದ ವಿದ್ಯುತ್ ಉತ್ಪಾದಿಸಲಾಗುತ್ತಿದೆ ; ಇದರಿಂದ ಸರ್ಕಾರದ ಬೊಕ್ಕಸಕ್ಕೆ ಉಂಟಾಗುವ ಲಾಭ ಮತ್ತು ನಷ್ಟವೆಷ್ಟು (ವಿವರ ನೀಡುವುದು) ?

## ವಿದ್ಯುತ್ ಯೋಜನೆಯ ಜಾರಿ ಪ್ರಕ್ರಿಯೆ

**ಶ್ರೀ ವಿ. ಸೋಮಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೭೩ (೨೬೪) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಛತ್ತೀಸ್‌ಗಢ ವಿದ್ಯುತ್ ಯೋಜನೆಯ ಜಾರಿ ಪ್ರಕ್ರಿಯೆಗಳು ಯಾವ ಹಂತದಲ್ಲಿವೆ; ಈ ಯೋಜನೆ ನೆನೆಗುದಿಗೆ ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇದಕ್ಕೆ ಕಾರಣಗಳೇನು (ವಿವರ ಒದಗಿಸುವುದು) ;

(ಆ) ಈ ಯೋಜನೆಗೆ ಒಪ್ಪಂದವಾಗಿದ್ದು ಯಾವಾಗ; ಇದಕ್ಕೆ ಪರಿಸರ ಇಲಾಖೆಯ ಅನುಮತಿ ಹಾಗೂ ಕಲ್ಲಿದ್ದಲು ಹಂಚಿಕೆ ಲಭ್ಯವಿಲ್ಲದಿರುವುದು ನಿಜವೇ; ಇದಕ್ಕೆ ಕಾರಣಗಳೇನು ;

(ಇ) ಸದರಿ ಯೋಜನೆಯಿಂದ ಎಷ್ಟು ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡಲು ಉದ್ದೇಶಿಸಲಾಗಿತ್ತು; ಈ ಯೋಜನೆ ಅನುಷ್ಠಾನಕ್ಕೆ ಬೇಕಾಗಿದ್ದ ಅಂದಾಜು ಯೋಜನಾ ಮೊತ್ತವೆಷ್ಟು; ಇಂತಹ ಉಷ್ಣವಿದ್ಯುತ್ ಉತ್ಪಾದನಾ ಘಟಕಕ್ಕೆ ಬೇಕಾದ ಭೂಮಿ ಎಷ್ಟು ; ಇದಕ್ಕೆ ಜಾಗವನ್ನು ಗುರುತಿಸಲಾಗಿದೆಯೇ ;

(ಈ) ಈ ಯೋಜನೆಯನ್ನು ಯಾವಾಗ ಪೂರ್ಣಗೊಳಿಸಲು ಅಂದಾಜಿಸಲಾಗಿತ್ತು; ಯೋಜನೆ ಜಾರಿ ವಿಳಂಬವಾಗುವುದರಿಂದ ಯೋಜನೆ ವೆಚ್ಚ ಜಾಸ್ತಿಯಾಗುವುದೆಂದು ಸರ್ಕಾರ ಭಾವಿಸುವುದಿಲ್ಲವೆ (ವಿವರಗಳನ್ನು ಒದಗಿಸುವುದು) ?

## ಬೆಂಗಳೂರು ಮಹಾನಗರದಲ್ಲಿ ಉಂಟಾಗಿರುವ ಲೋಡ್‌ಶೆಡ್ಡಿಂಗ್

**ಶ್ರೀ ಅಶ್ವತ್‌ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೭೪ (೨೭೦) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ಮಹಾನಗರದಲ್ಲಿ ಇತ್ತೀಚೆಗೆ ಲೋಡ್ ಶೆಡ್ಡಿಂಗ್ ವ್ಯಾಪಕವಾಗಿ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಇದರಿಂದ ಕೈಗಾರಿಕೆಗಳಿಗೆ ತೊಂದರೆಯಾಗುತ್ತಿಲ್ಲವೇ ; ಈ ತೊಂದರೆ ನಿವಾರಣೆಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು ?

## ಎ.ಪಿ.ಎಂ.ಸಿ. ಬೆಲ್ಲದ ಮಾರುಕಟ್ಟೆ

**ಶ್ರೀ ಅಶ್ವತ್‌ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೭೫ (೩೧೦) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಂಡ್ಯದ ಎ.ಪಿ.ಎಂ.ಸಿ. ಬೆಲ್ಲದ ಮಾರುಕಟ್ಟೆಯಲ್ಲಿ ಇ–ಟೆಂಡರ್ (ಬೆಲ್ಲದ ಆನ್‌ಲೈನ್) ವ್ಯವಸ್ಥೆಯ ಪರ–ವಿರುದ್ಧ ಹಗ್ಗಜಗ್ಗಾಟ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದರೆ, ಈ ನಿಟ್ಟಿನಲ್ಲಿ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು ?



## ವಿದ್ಯುತ್ ಅಪಘಾತದಲ್ಲಿ ಮೃತರಾದವರು

**ಶ್ರೀ ಅಶ್ವತ್‌ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೭೬ (೩೧೧) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೧೩ ರಿಂದ ಇಲ್ಲಿಯವರೆಗೆ ವಿದ್ಯುತ್ ಅಪಘಾತದಿಂದ ಸತ್ತವರ ಸಂಖ್ಯೆ ಎಷ್ಟು ;

(ಆ) ಸತ್ತ ಕುಟುಂಬಸ್ಥರಿಗೆ ಯಾವ ರೀತಿ ಪರಿಹಾರವನ್ನು ನೀಡಲಾಗಿದೆ (ಅಪಘಾತಕ್ಕೊಳಗಾದವರ ವಿಳಾಸಗಳನ್ನು ಜಿಲ್ಲಾವಾರು ನೀಡುವುದು) ?

## ಲೋಕೋಪಯೋಗಿ ಕಾಮಗಾರಿಗಳು

**ಶ್ರೀ ಅಶ್ವತ್‌ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೭೭ (೩೧೨) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೧೩–೧೪ ಮತ್ತು ೨೦೧೪–೧೫ನೇ ಸಾಲಿನ ಮಂಡ್ಯ ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆಯಿಂದ ಯಾವ ಯಾವ ಶೀರ್ಷಿಕೆಯಡಿ ಹಾಗೂ ಯಾವ ಅನುದಾನದಡಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ;

(ಆ) ಯಾವ ಯಾವ ಪ್ರದೇಶಗಳಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ; ಪ್ರತಿ ಕಾಮಗಾರಿಯ ಗರಿಷ್ಠ ಮೊತ್ತವೇನು ;

(ಇ) ಕೈಗೊಂಡ ಕಾಮಗಾರಿಗಳಲ್ಲಿ ಎಷ್ಟು ಕಾಮಗಾರಿಗಳು ಪೂರ್ಣಗೊಂಡಿವೆ; ಎಷ್ಟು ಕಾಮಗಾರಿಗಳು ಪ್ರಗತಿಯಲ್ಲಿವೆ

(ಪೂರ್ಣಗೊಂಡ ಹಾಗೂ ಪ್ರಗತಿಯಲ್ಲಿರುವ ಕಾಮಗಾರಿಗಳ ಭಾವಚಿತ್ರಗಳನ್ನು ನೀಡುವುದು; ಹಾಗೂ ಎಲ್ಲಾ ಬಗೆಯ ಕಾಮಗಾರಿಗಳ ಅಂದಾಜು ಪಟ್ಟಿ (Estimate) ಮತ್ತು ಎಂ.ಬಿ. ಜೆರಾಕ್ಸ್ ಪ್ರತಿಗಳನ್ನು ನೀಡುವುದು) ?

## ಸುವರ್ಣಸೌಧದ ಸುತ್ತಮುತ್ತಲು ಗಿಡಮರಗಳನ್ನು ಬೆಳೆಸುವುದು

**ಡಾ॥ ಮತ್ತಿಕಟ್ಟಿ ವೀರಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೭೮ (೨೭೧) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉತ್ತರ ಕರ್ನಾಟಕದ ಹೆಬ್ಬಾಗಿಲು ಎಂದು ಪ್ರಸಿದ್ದವಾಗಿರುವ ಕುಂದಾನಗರಿ ಬೆಳಗಾವಿಯಲ್ಲಿ ಲಾಲ್‌ಬಾಗ್ ಮತ್ತು ಕಬ್ಬನ್‌ಪಾರ್ಕ್ ಮಾದರಿಯ ಪಾರ್ಕ್‌ಗಳನ್ನು ಅಭಿವೃದ್ಧಿಪಡಿಸಲಾಗುವುದೇ ;

(ಆ) ಬೆಳಗಾವಿಯ ಸುವರ್ಣಸೌಧದ ಸುತ್ತಮುತ್ತಲು ಸುಂದರ ಗಿಡಮರಗಳನ್ನು ನೆಡಲು ಮತ್ತು ಹೂದೋಟವನ್ನು ಅಭಿವೃದ್ಧಿಪಡಿಸಲು ಯಾವಾಗ ಕ್ರಮ ಕೈಗೊಳ್ಳಲಾಗುವುದು ;

(ಇ) ಜಿಲ್ಲೆಯಲ್ಲಿ ಅಲ್ಫಾನ್ಸೋ ಮಾದರಿ ಮಾವು ತಳಿ ಅಭಿವೃದ್ಧಿಪಡಿಸಲು ವಿಶೇಷ ಯೋಜನೆಯನ್ನು ಹಮ್ಮಿಕೊಳ್ಳಲಾಗುವುದೇ ?

## ಬೆಳಗಾವಿಯಲ್ಲಿ ಫುಡ್‌ಪಾರ್ಕ್ ನಿರ್ಮಾಣ

**ಡಾ॥ ಮತ್ತಿಕಟ್ಟಿ ವೀರಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೭೯ (೩೦೭) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಳಗಾವಿಯು ತರಕಾರಿ ಬೆಳೆಗೆ ಪ್ರಸಿದ್ಧವಿದ್ದು, ಹೆಚ್ಚಿನ ತರಕಾರಿಯು ಗೋವಾ ಮತ್ತು ಮಹಾರಾಷ್ಟ್ರದ ಕೊಲ್ಹಾಪುರ, ಪೂನಾ ಮತ್ತು ಮುಂಬೈಗಳಿಗೆ ರವಾನೆಯಾಗುತ್ತಿದ್ದು, ರೈತರಿಗೆ ನ್ಯಾಯಯುತ ಬೆಲೆ ಸಿಕ್ಕದೇ ಅವರು ಸಂಕಷ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;



(ಆ) ಹಾಗಿದ್ದಲ್ಲಿ, ಇಲ್ಲಿ ಉತ್ತಮ ತರಕಾರಿ ಮಾರುಕಟ್ಟೆ ಅಭಿವೃದ್ಧಿಪಡಿಸಿ, ಮಧ್ಯವರ್ತಿಗಳ ಹಾವಳಿ ತಪ್ಪಿಸಿ, ರೈತರಿಗೆ ನ್ಯಾಯಯುತ ಬೆಲೆ ಸಿಗುವಂತೆ ಮಾಡಲು ಸರ್ಕಾರವು ಯಾವ ಯಾವ ಕ್ರಮಗಳನ್ನು ಕೈಗೊಳ್ಳಲಿದೆ ;

(ಇ) ಬೆಳಗಾವಿಯಲ್ಲಿ "ಫುಡ್‌ಪಾರ್ಕ್" ನಿರ್ಮಿಸಲಾಗುವುದೇ ;

(ಈ) ಈ ನಗರದಲ್ಲಿ ಹಣ್ಣು ಮತ್ತು ತರಕಾರಿ ಸಂರಕ್ಷಿಸಲು ಉತ್ತಮ ಶೀತಲಗೃಹವನ್ನು ಸ್ಥಾಪಿಸಲಾಗುವುದೇ ?

## ಕಬ್ಬು ಬೆಳೆಗಾರರ ಸಮಸ್ಯೆಗಳ ನಿವಾರಣೆ

**ಡಾ॥ ಮತ್ತಿಕಟ್ಟಿ ವೀರಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೮೦ (೩೦೮) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಬ್ಬು ಬೆಳೆಗಾರರ ವಿವಿಧ ಸಮಸ್ಯೆಗಳ ನಿವಾರಣೆಗಾಗಿ ಬೆಂಗಳೂರಿನಲ್ಲಿನ ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಆಯುಕ್ತರ ಕಛೇರಿಯನ್ನು ಅತಿ ಹೆಚ್ಚು ಸಕ್ಕರೆ ಕಾರ್ಖಾನೆಗಳಿರುವ ಬೆಳಗಾವಿಗೆ ಸ್ಥಳಾಂತರಿಸಲಾಗುವುದೇ ;

(ಆ) ಸಂಕಷ್ಟದಲ್ಲಿರುವ ಕಬ್ಬು ಬೆಳೆಗಾರರಿಗೆ ನ್ಯಾಯಯುತ ಬೆಲೆಯನ್ನು ಯಾವಾಗ ನಿಗದಿಪಡಿಸಲಾಗುವುದು ;

(ಇ) ಸಕ್ಕರೆ ಕಾರ್ಖಾನೆಗಳಿಗೆ ರೈತರು ಒದಗಿಸಿರುವ ಕಬ್ಬಿಗೆ ಸಕಾಲದಲ್ಲಿ ಹಣ ಪಾವತಿಯಾಗುವಂತೆ ಸರ್ಕಾರವು ಕೈಗೊಳ್ಳುವ ಕ್ರಮಗಳೇನು ?

## ಸಂಪೂರ್ಣ ಸೋಲಾರ್ ಗ್ರಾಮಗಳ ಸ್ಥಾಪನೆ

**ಡಾ॥ ಮತ್ತಿಕಟ್ಟಿ ವೀರಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೮೧ (೩೭೯) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉತ್ತರ ಕರ್ನಾಟಕದ ಅಭಿವೃದ್ಧಿ ವಂಚಿತ ಜಿಲ್ಲೆಗಳಲ್ಲಿನ ರೈತರು ತೀವ್ರ ಇಂಧನದ ಕೊರತೆಯಿಂದಾಗಿ ಸಂಕಷ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಈ ಭಾಗದಲ್ಲಿನ ವಿದ್ಯುತ್ ಕೊರತೆ ನಿವಾರಿಸಲು ಸರ್ಕಾರವು ಯಾವ ಕ್ರಮಗಳನ್ನು ಕೈಗೊಳ್ಳಲಿದೆ ;

(ಇ) ಈ ಭಾಗದಲ್ಲಿ ಸೋಲಾರ್ ವಿದ್ಯುತ್ ಅಭಿವೃದ್ಧಿಪಡಿಸಲು ಸರ್ಕಾರವು ಯಾವ ಯಾವ ಕ್ರಮಗಳನ್ನು ಕೈಗೊಳ್ಳುತ್ತಿದೆ; ಈ ಯೋಜನೆಯಲ್ಲಿ ಪಾಲ್ಗೊಳ್ಳುವ ರೈತರಿಗೆ ವಿಶೇಷ ಸವಲತ್ತುಗಳನ್ನು ಒದಗಿಸಲಾಗುವುದೇ ;

(ಈ) ಉತ್ತರ ಕರ್ನಾಟಕದ ಯಾವ ಯಾವ ಭಾಗಗಳಲ್ಲಿ ಸಂಪೂರ್ಣ ಸೋಲಾರ್ ಗ್ರಾಮಗಳನ್ನು ಸ್ಥಾಪಿಸಲಾಗುವುದು ?

## ರೈತರಿಗೆ ಕೃಷಿ ಪರಿಕರಗಳು

**ಶ್ರೀ ದಯಾನಂದ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೮೨ (೨೭೬) ಮಾನ್ಯ ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೦೩ ವರ್ಷಗಳಿಂದ ಕೃಷಿ ಇಲಾಖಾ ವತಿಯಿಂದ ರೈತರಿಗೆ ಕೃಷಿ ಸಲಕರಣೆ, ಯಂತ್ರೋಪಕರಣ ಹಾಗೂ ಕೃಷಿ ಸಂಬಂಧಿತ ವಾಹನಗಳ ಖರೀದಿಗೆ ಎಷ್ಟು ಸಹಾಯಧನ ನೀಡಲಾಗಿದೆ ;



(ಆ) ೨೦೧೪–೧೫ರ ಬಜೆಟ್‌ನಲ್ಲಿ ಯಾವ ಯಾವ ಯೋಜನೆಗಳಿಗೆ ಸಹಾಯಧನ ನಿಗದಿಪಡಿಸಲಾಗಿದೆ; ಈಗಾಗಲೇ ನೀಡಲಾಗಿರುವ ವಿವಿಧ ಯೋಜನೆಗಳ ವಿವರಗಳನ್ನು ನೀಡುವುದು ;

(ಇ) ಈ ಸಹಾಯಧನದ ಯೋಜನೆಗಳಿಗೆ ಫಲಾನುಭವಿಗಳನ್ನು ಆಯ್ಕೆ ಮಾಡಲು ಸರ್ಕಾರವು ಅನುಸರಿಸುತ್ತಿರುವ ಮಾನದಂಡನೆಗಳೇನು ;

(ಈ) ಕಳೆದ ೦೩ ವರ್ಷಗಳಲ್ಲಿ ಈ ಯೋಜನೆಯ ಸಹಾಯಧನಕ್ಕಾಗಿ ಎಷ್ಟು ಜನರು ಅರ್ಜಿಯನ್ನು ಸಲ್ಲಿಸಿರುತ್ತಾರೆ; ಎಷ್ಟು ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ; ಬಾಕಿ ಉಳಿದಿರುವ ಅರ್ಜಿಗಳ ಸಂಖ್ಯೆ ಎಷ್ಟು ?

## ರೈತರಿಗೆ ನೀರಾವರಿ ಪಂಪ್‌ಸೆಟ್‌ಗಳ ವಿತರಣೆ

**ಶ್ರೀ ದಯಾನಂದ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೮೩ (೨೭೫) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೧ ವರ್ಷದಿಂದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಎಷ್ಟು ರೈತರಿಗೆ ಸುಧಾರಿತ ತಂತ್ರಜ್ಞಾನ ಮತ್ತು ಮೌಲ್ಯವರ್ಧನೆಗೆ ಶೇ.೯೦ ರಷ್ಟು ಸಹಾಯ ಧನವನ್ನು ನೀಡಲಾಗಿದೆ ;

(ಆ) ೨೦೧೩–೧೪ರ ಬಜೆಟ್‌ನಲ್ಲಿ ಘೋಷಿಸಿರುವಂತೆ, ನೀರಾವರಿ ಪಂಪ್‌ಸೆಟ್‌ಗಳಿಗೆ ಹಾಗೂ ಇತರೆ ಇಂಧನ ಚಾಲಿತ ಯಂತ್ರಗಳಲ್ಲಿ ಸೌರಶಕ್ತಿಯ ಬಳಕೆಗೆ ಶೇ.೭೫ ರಷ್ಟು ಸಹಾಯ ಧನವನ್ನು ಎಷ್ಟು ರೈತರಿಗೆ ನೀಡಲಾಗಿದೆ ;

(ಇ) ವಿಶೇಷ ಮಾರುಕಟ್ಟೆ ಯೋಜನೆಯಡಿಯಲ್ಲಿ ಹಾಪ್‌ಕಾಮ್ಸ್‌ನ ತೋಟಗಾರಿಕಾ ಉತ್ಪಾದನೆಗಳನ್ನು ನಿರ್ವಹಿಸಲು ಎಷ್ಟು ರೈತರಿಗೆ ಸರ್ಕಾರದ ವತಿಯಿಂದ ಸಹಾಯಧನ ನೀಡಲಾಗಿದೆ ?

## ಬಡಾವಣೆಗಳ ಮೇಲೆ ಹಾದು ಹೋಗಿರುವ ವಿದ್ಯುತ್ ಕೇಬಲ್‌ಗಳು

**ಶ್ರೀ ದಯಾನಂದ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೮೪ (೨೭೭) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ಹಾಗೂ ಸುತ್ತಮುತ್ತಲಿನ ಯಾವ ಯಾವ ಪ್ರದೇಶಗಳಲ್ಲಿ ಹೊಸದಾಗಿ ನಿರ್ಮಿತವಾಗಿರುವ ಬಡಾವಣೆ ಮತ್ತು ಗ್ರಾಮಗಳ ಮನೆಗಳ ಮೇಲೆ ೬೬ ಕೆವಿ ವಿದ್ಯುತ್ ಮಾರ್ಗಗಳು ಹಾದು ಹೋಗಿದೆ; ಈ ಮಾರ್ಗಗಳನ್ನು ಭೂಗತ ಕೇಬಲ್‌ಗಳನ್ನಾಗಿ ಪರಿವರ್ತಿಸುವ ಪ್ರಸ್ತಾವನೆ ಸರ್ಕಾರದಲ್ಲಿದೆಯೇ ;

(ಆ) ಈ ಕೇಬಲ್‌ಗಳು ಹಾದು ಹೋಗಿರುವ ವಿದ್ಯುತ್ ಮಾರ್ಗದ ಕೆಳಗೆ ಎಷ್ಟು ಮನೆಗಳನ್ನು ಅನಧಿಕೃತವಾಗಿ ಕಟ್ಟಲಾಗಿದೆ; ಈ ರೀತಿ ಹಾದುಹೋಗಿರುವ ಕೇಬಲ್‌ಗಳಿಂದ ಎಷ್ಟು ಜನರಿಗೆ ವಿದ್ಯುತ್ ಸ್ಪರ್ಶವಾಗಿ ಸಾವಿಗೀಡಾಗಿದ್ದಾರೆ; ಈ ಸಾವಿಗೀಡಾದ ಜನರಿಗೆ ಸರ್ಕಾರದಿಂದ ಎಷ್ಟು ಪರಿಹಾರ ನೀಡಲಾಗಿದೆ ?

## ಪುರಸಭೆಯಲ್ಲಿನ ಅಕ್ರಮಗಳು

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) :–**

೮೫ (೨೭೮) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಂಡ್ಯ ಜಿಲ್ಲೆ, ಮಳವಳ್ಳಿ ಪುರಸಭೆಯಲ್ಲಿ ಅಧಿಕಾರಿಗಳು ಹಣ ದುರ್ಬಳಕೆ, ದಾಖಲೆಗಳನ್ನು ನಾಶಪಡಿಸಿರುವುದು, ನಿಯಮ



ಬಾಹಿರವಾಗಿ ಕಡತಗಳ ವಿಲೇವಾರಿ ಮಾಡಿ ಸರ್ಕಾರಕ್ಕೆ ನಷ್ಟ ಉಂಟು ಮಾಡುತ್ತಿರುವುದು ಹಾಗೂ ಅಕ್ರಮಗಳನ್ನು ನಡೆಸಿರುವ ಸಂಬಂಧ ಸಾರ್ವಜನಿಕರಿಂದ ಹಾಗೂ ಪುರಸಭಾ ಸದಸ್ಯರಿಂದ ದೂರುಗಳು ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಇಲಾಖಾ ಅಧಿಕಾರಿಗಳಿಂದ ಪ್ರಾಥಮಿಕ ವರದಿಯನ್ನು ಪಡೆಯಲಾಗಿದೆಯೇ ;

(ಇ) ಹಾಗಾದರೆ, ಪ್ರಾಥಮಿಕ ವರದಿಯಲ್ಲಿನ ಅಂಶಗಳೇನು (ವಿವರಗಳೊಂದಿಗೆ) ;

(ಈ) ಸದರಿ ವರದಿಗಳನ್ನು ಆಧರಿಸಿ, ಸರ್ಕಾರ ಇದುವರೆವಿಗೂ ಕೈಗೊಂಡಿರುವ ಕ್ರಮಗಳೇನು (ವಿವರಗಳೊಂದಿಗೆ) ?

## ಸಹಕಾರ ಸಂಘ ಹಾಗೂ ಬ್ಯಾಂಕುಗಳಿಂದ ರೈತರ ಸಾಲಮನ್ನಾ

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) :–**

೮೬ (೨೮೦) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಹಕಾರ ಸಂಘ ಹಾಗೂ ಬ್ಯಾಂಕುಗಳಲ್ಲಿ ಕೃಷಿ ಸಾಲ ಪಡೆದಿದ್ದ ರೈತರಿಗೆ ರೂ.೨೫,೦೦೦/– ಅಸಲು ಮತ್ತು ಬಡ್ಡಿಯನ್ನು ಹಿಂದಿನ ಸರ್ಕಾರ ಮನ್ನಾ ಮಾಡಲಾಗಿದೆಯೇ ;

(ಆ) ಹಾಗಾದರೆ ಈ ಸಂಬಂಧ ಒಟ್ಟು ಎಷ್ಟು ಫಲಾನುಭವಿಗಳಿಗೆ, ಎಷ್ಟು ಮೊತ್ತದ ಹಣವನ್ನು (ಅಸಲು ಮತ್ತು ಬಡ್ಡಿ) ಸರ್ಕಾರ ಪಾವತಿಸಬೇಕಾಗಿತ್ತು (ವಿವರಗಳೊಡನೆ) ;

(ಇ) ಇದುವರೆವಿಗೂ ಸರ್ಕಾರ ಪಾವತಿಸಿರುವ ಮೊತ್ತವೆಷ್ಟು ;

(ಈ) ಬಾಕಿ ಮೊತ್ತ ಪಾವತಿಸುವಲ್ಲಿ ವಿಳಂಬ ಉಂಟಾಗಲು ಕಾರಣಗಳೇನು ;

(ಉ) ಬಾಕಿ ಮೊತ್ತವನ್ನು ಯಾವ ಕಾಲ ಮಿತಿಯಲ್ಲಿ ಪಾವತಿಸಲು ಕ್ರಮ ಕೈಗೊಳ್ಳಲಾಗಿದೆ ?

## ಪ್ರವಾಸಿ ಮಂದಿರ ಹಾಗೂ ಅತಿಥಿ ಗೃಹಗಳು

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) :–**

೮೭ (೨೮೧) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಲೋಕೋಪಯೋಗಿ ಇಲಾಖಾ ವ್ಯಾಪ್ತಿಯ ಅಧೀನದಲ್ಲಿರುವ ಪ್ರವಾಸಿ ಮಂದಿರ ಹಾಗೂ ಅತಿಥಿ ಗೃಹಗಳೆಷ್ಟು (ಜಿಲ್ಲಾವಾರು, ತಾಲ್ಲೂಕುವಾರು ಮಾಹಿತಿ ನೀಡುವುದು) ;

(ಆ) ಕೋಲಾರ, ಚಿಕ್ಕಬಳ್ಳಾಪುರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಇನ್ನೂ ಹಳೆಯ ಪ್ರವಾಸಿ ಮಂದಿರ ಹಾಗೂ ಅತಿಥಿ ಗೃಹಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಬಂದಿದ್ದರೆ, ಕೋಲಾರ, ಚಿಕ್ಕಬಳ್ಳಾಪುರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ ಯಾವ ಯಾವ ತಾಲ್ಲೂಕುಗಳಲ್ಲಿ ಹೊಸದಾಗಿ ಪ್ರವಾಸಿ ಮಂದಿರ ಹಾಗೂ ಅತಿಥಿ ಗೃಹಗಳನ್ನು ನಿರ್ಮಿಸಲು ಸರ್ಕಾರ ಯೋಚಿಸಿದೆ (ವಿವರ ನೀಡುವುದು) ?



## ರೈತರ ಆತ್ಮಹತ್ಯೆ ಪ್ರಕರಣಗಳು

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) :–**

೮೮ (೨೮೨) ಮಾನ್ಯ ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೨ ವರ್ಷಗಳಿಂದ ದಾಖಲಾಗಿರುವ ರೈತರ ಆತ್ಮಹತ್ಯೆ ಪ್ರಕರಣಗಳೆಷ್ಟು (ಜಿಲ್ಲಾವಾರು, ತಾಲ್ಲೂಕುವಾರು ಮಾಹಿತಿ ನೀಡುವುದು) ;

(ಆ) ರೈತರ ಆತ್ಮಹತ್ಯೆಗೆ ನಿಖರವಾದ ಕಾರಣಗಳೇನು ;

(ಇ) ರೈತರ ಆತ್ಮಹತ್ಯೆ ತಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ರೈತರ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಪೂರೈಕೆ

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) :–**

೮೯ (೨೮೪) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಹಾಲಿ ಚಾಲ್ತಿಯಲ್ಲಿರುವ ರೈತರ ಪಂಪ್‌ಸೆಟ್ ಸಂಖ್ಯೆ ಎಷ್ಟು (ಜಿಲ್ಲಾವಾರು, ತಾಲ್ಲೂಕುವಾರು ಮಾಹಿತಿ ನೀಡುವುದು) ;

(ಆ) ರೈತರ ಪಂಪ್‌ಸೆಟ್‌ಗಳಿಗೆ ಸದ್ಯ ಎಷ್ಟು ಗಂಟೆಗಳ ಕಾಲ ವಿದ್ಯುತ್ ಪೂರೈಸಲಾಗುತ್ತಿದೆ ;

(ಇ) ರೈತರ ಪಂಪ್‌ಸೆಟ್‌ಗಳಿಗೆ ೨೪ ಗಂಟೆಗಳ ಕಾಲ ವಿದ್ಯುತ್ ಪೂರೈಸಲು ಯೋಜನೆಗಳೇನಾದರೂ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಈ ಯೋಜನೆಗಳು ಯಾವುವು (ವಿವರ ನೀಡುವುದು) ?

## ವಿದ್ಯುತ್ ಸಂಪರ್ಕವಿಲ್ಲದ ವಸತಿ ಸ್ಥಳಗಳು

**ಡಾ॥ ಜಯಮಾಲ ರಾಮಚಂದ್ರ (ನಾಮನಿರ್ದೇಶನ) :–**

೯೦ (೨೮೬) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉತ್ತರ ಕರ್ನಾಟಕ ಮತ್ತು ಹೈದರಾಬಾದ್–ಕರ್ನಾಟಕ ಜಿಲ್ಲೆಗಳಲ್ಲಿ ಈವರೆವಿಗೂ ವಿದ್ಯುತ್ ಸಂಪರ್ಕಗಳಿಲ್ಲದೆ, ಕತ್ತಲೆಯಲ್ಲಿ ರಾತ್ರಿ ಕಳೆಯುತ್ತಿರುವ ಗ್ರಾಮ, ತಾಂಡ, ಕಾಲೋನಿ ಮತ್ತು ಜನವಾಸ ಸ್ಥಳಗಳನ್ನು ಸರ್ಕಾರ ಗುರುತಿಸಿದೆಯೇ ;

(ಆ) ಗುರುತಿಸಿದ್ದಲ್ಲಿ ಅಥವಾ ಮಾಹಿತಿ ಲಭಿಸಿದ್ದಲ್ಲಿ ಅಂತಹ ಸ್ಥಳಗಳೆಷ್ಟು ಮತ್ತು ಅವುಗಳು ಯಾವುವು (ಜಿಲ್ಲಾವಾರು ವಿವರ ನೀಡುವುದು) ;

(ಇ) ಇವುಗಳಿಗೆ ಭಾಗ್ಯಜ್ಯೋತಿ ಮತ್ತು ಕುಟೀರ ಜ್ಯೋತಿ ಹಾಗೂ ಮತ್ತಿತರೆ ಯೋಜನೆಗಳಡಿ ಎಷ್ಟು ವಿದ್ಯುತ್ ಸಂಪರ್ಕಗಳನ್ನು ಒದಗಿಸಲು ಅವಕಾಶಗಳಿವೆ (ಜಿಲ್ಲಾವಾರು ವಿವರ ನೀಡುವುದು) ;

(ಈ) ಹಾಗಿದ್ದಲ್ಲಿ, ಸಂಪರ್ಕ ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ;

(ಉ) ಇನ್ನುಳಿದಂತೆ 'ಕತ್ತಲು ಮುಕ್ತ ಕರ್ನಾಟಕ ರಾಜ್ಯ'ವನ್ನು ನಿರ್ಮಾಣ ಮಾಡಲು ಸರ್ಕಾರ ಏನೇನು ಕ್ರಮಗಳನ್ನು ಕೈಗೊಳ್ಳಲಿದೆ ?



## ಅಲ್ಪಸಂಖ್ಯಾತ ಮಹಿಳೆಯರ ಅಭಿವೃದ್ಧಿ

**ಡಾ॥ ಜಯಮಾಲ ರಾಮಚಂದ್ರ (ನಾಮನಿರ್ದೇಶನ) :–**

೯೧ (೨೮೫) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉತ್ತರ ಕರ್ನಾಟಕ ಮತ್ತು ಹೈದರಾಬಾದ್–ಕರ್ನಾಟಕ ಜಿಲ್ಲೆಗಳಲ್ಲಿ ಮಹಿಳೆಯ ಅಭಿವೃದ್ಧಿಗಾಗಿ ವಕ್ಫ್ ಫೌಂಡೇಶನ್ ವತಿಯಿಂದ ಯಾವ್ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ; ಕಳೆದ ಒಂದು ವರ್ಷದ ಫಲಾನುಭವಿಗಳ ಜಿಲ್ಲಾವಾರು ವಿವರಗಳನ್ನು ನೀಡುವುದು ;

(ಆ) ಕಾರ್ಯಕ್ರಮದ ಬೇಡಿಕೆ ಮತ್ತು ಪೂರೈಕೆಗಳೇನು (ಜಿಲ್ಲಾವಾರು ವಿವರಗಳನ್ನು ನೀಡುವುದು) ?

## ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ

**ಶ್ರೀ ವೀರಕುಮಾರ್ ಅಪ್ಪಾಸೊ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೯೨ (೨೮೮) ಮಾನ್ಯ ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಳಗಾವಿ ಜಿಲ್ಲೆಗೆ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಸರ್ಕಾರವು ಕಳೆದ ೨ ವರ್ಷಗಳಲ್ಲಿ ಬಿಡುಗಡೆ ಮಾಡಿದ ಹಣವೆಷ್ಟು ;

(ಆ) ಈ ಯೋಜನೆಯಡಿ ಕೈಗೊಂಡ ಕಾಮಗಾರಿಗಳು ಎಷ್ಟು ಮತ್ತು ಖರ್ಚಾದ ಮೊತ್ತ ಎಷ್ಟು (ತಾಲ್ಲೂಕುವಾರು ವಿವರ ನೀಡುವುದು) ?

## ರಸ್ತೆಯನ್ನು ಮೇಲ್ದರ್ಜೆಗೇರಿಸುವುದು

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೯೩ (೨೯೨) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಳಗಾವಿ ಜಿಲ್ಲೆಯ ಗೋಟುರು–ಕಾಗವಾಡ–ಬಿಜಾಪೂರ ರಸ್ತೆಯನ್ನು ರಾಜ್ಯ ಹೆದ್ದಾರಿಯಿಂದ ರಾಷ್ಟ್ರೀಯ ಹೆದ್ದಾರಿಯಾಗಿ ಮೇಲ್ದರ್ಜೆಗೇರಿಸುವ ವಿಚಾರ ಸರ್ಕಾರದ ಮುಂದಿದೆಯೇ ;

(ಆ) ಹಾಗಿದ್ದಲ್ಲಿ, ಸದರಿ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆಯೇ ;

(ಇ) ಸದರಿ ರಸ್ತೆಯ ಮೇಲ್ದರ್ಜೆಗೆ ಅಂದರೆ ರಾಷ್ಟ್ರೀಯ ಹೆದ್ದಾರಿಯಾಗಿ ಮೇಲ್ದರ್ಜೆಗೇರಿಸುವ ಒಟ್ಟು ಅಂತರ ಎಷ್ಟು ;

(ಈ) ಸದರಿ ಯೋಜನೆಗೆ ಒಟ್ಟು ತಗಲುವ ಅಂದಾಜು ಮೊತ್ತವೆಷ್ಟು ?

## ವಿದ್ಯುತ್ ಪರಿವರ್ತಕಗಳು ಹಾಳಾಗಿ ರೈತರಿಗೆ ಮತ್ತು ಸಾರ್ವಜನಿಕರಿಗೆ ತೊಂದರೆ

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೯೪ (೨೯೩) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ವಿದ್ಯುತ್ ವಿತರಣಾ ವ್ಯವಸ್ಥೆಯ ವಿದ್ಯುತ್ ಪರಿವರ್ತಕಗಳು (ಟ್ರಾನ್ಸ್‌ಫಾರ್ಮರ್) ನಿರಂತರವಾಗಿ ಹಾಳಾಗಿ



ವಿದ್ಯುತ್ ವಿತರಣಾ ವ್ಯವಸ್ಥೆಯಲ್ಲಿ ರೈತರಿಗೆ ಹಾಗೂ ಸಾರ್ವಜನಿಕರಿಗೆ ತೊಂದರೆ ಆಗುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬೆಳಗಾವಿ ಜಿಲ್ಲೆಯಲ್ಲಿ ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ವಿದ್ಯುತ್ ಪರಿವರ್ತಕಗಳು ಎಷ್ಟು ;

(ಇ) ಜಿಲ್ಲೆಯಲ್ಲಿ ಇನ್ನೂ ಎಷ್ಟು ಹೆಚ್ಚಿಗೆ ವಿದ್ಯುತ್ ಪರಿವರ್ತಕಗಳ ಅಗತ್ಯವಿದೆ; ಅವುಗಳನ್ನು ಯಾವ ಕಾಲಮಿತಿಯಲ್ಲಿ ಪೂರೈಸಲಾಗುವುದು ;

(ಈ) ರೈತರಿಗೆ ತೊಂದರೆಯಾಗದಂತೆ ವಿದ್ಯುತ್ ಪರಿವರ್ತಕಗಳನ್ನು ಸುಲಭವಾಗಿ ದೊರೆಯುವಂತೆ ಮಾಡಲು ಸರ್ಕಾರ ಯೋಜನೆಯನ್ನು ರೂಪಿಸಿದೆಯೇ ?

## ಕೃಷಿ ಬೆಲೆ ಆಯೋಗ ರಚನೆ

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೯೫ (೨೯೦) ಮಾನ್ಯ ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ೨೦೧೩–೧೪ನೇ ಸಾಲಿನಲ್ಲಿ ಕೃಷಿ ಬೆಲೆ ಆಯೋಗ ರಚಿಸಿ ಸರ್ಕಾರವು ಅಧಿಸೂಚನೆ ಹೊರಡಿಸಿರುವುದು ನಿಜವಲ್ಲವೆ; ಈ ಆಯೋಗದ ಕಾರ್ಯವ್ಯಾಪ್ತಿ ಹಾಗೂ ಕಾರ್ಯಚಟುವಟಿಕೆಗಳು ಏನು ;

(ಆ) ಕೃಷಿ ಬೆಲೆ ಆಯೋಗದ ಕಾರ್ಯಸೂಚಿಗಳಾವುವು ;

(ಇ) ಕೃಷಿ ಬೆಲೆ ಆಯೋಗದ ಸದಸ್ಯರ ಸಂಖ್ಯೆ ಎಷ್ಟು ;

(ಈ) ಸರ್ಕಾರ ರೂಪಿಸಿರುವ ನಿಯಮಾವಳಿ ಪ್ರಕಾರ ರೈತರು ಬೆಳೆದ ಬೆಳೆಗೆ ಬೆಂಬಲ ಬೆಲೆ ನೀಡಲು ಸರ್ಕಾರ ಕೈಗೊಂಡ ಕ್ರಮಗಳ ಬಗ್ಗೆ ವಿಶೇಷ ಹಣಕಾಸಿನ ವ್ಯವಸ್ಥೆ ಮಾಡಲಾಗಿದೆಯೇ ?

## ನಷ್ಟದಲ್ಲಿರುವ ಸಕ್ಕರೆ ಕಾರ್ಖಾನೆಗಳು

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೯೬ (೨೪೯) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಸರಕಾರಿ ಮತ್ತು ಸಹಕಾರಿ ಸಕ್ಕರೆ ಕಾರ್ಖಾನೆಗಳು ನಷ್ಟ ಅನುಭವಿಸುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದಲ್ಲಿ ಕಳೆದ ೧೦ ವರ್ಷಗಳಲ್ಲಿ ನಷ್ಟದಲ್ಲಿರುವ ಈ ಕಾರ್ಖಾನೆಗಳಿಗೆ ಸರಕಾರ ನೀಡಿರುವ ಸಹಾಯ ಧನವೆಷ್ಟು (ಕಾರ್ಖಾನೆವಾರು ಮಾಹಿತಿ ನೀಡುವುದು) ;

(ಇ) ಪ್ರಸ್ತುತ ಸರಕಾರ ಅಸ್ತಿತ್ವಕ್ಕೆ ಬಂದಾಗಿನಿಂದ ಉತ್ತರ ಕರ್ನಾಟಕದಲ್ಲಿ ನಷ್ಟದಲ್ಲಿರುವ ಸಹಕಾರಿ ಮತ್ತು ಸರಕಾರಿ ಸಕ್ಕರೆ ಕಾರ್ಖಾನೆಗಳಿಗೆ ನೀಡಿದ ಸಹಾಯಧನವೆಷ್ಟು (ಕಾರ್ಖಾನೆವಾರು ಮಾಹಿತಿ ನೀಡುವುದು) ;

(ಈ) ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು ಆರ್ಥಿಕವಾಗಿ ಪುನಃಶ್ಚೇತನಗೊಳಿಸುವ ವಿಚಾರ ಸರ್ಕಾರದ ಮುಂದೆ ಇದೆಯೇ ?



## ಸ್ಥಳೀಯ ಸಂಸ್ಥೆಗಳಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿ

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೯೭(೨೯೧) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿನ ಸ್ಥಳೀಯ ಸಂಸ್ಥೆಗಳಾದ ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯತಿಗಳಲ್ಲಿ ಖಾಲಿ ಇರುವ ಹುದ್ದೆಗಳು ಎಷ್ಟು ;

(ಆ) ಈ ಖಾಲಿ ಹುದ್ದೆಗಳನ್ನು ತುಂಬುವ ವಿಚಾರ ಸರ್ಕಾರದ ಮುಂದೆ ಇದೆಯೇ ;

(ಇ) ಅಲ್ಲದೆ, ಖಾಲಿ ಇರುವ ಪೌರ ಕಾರ್ಮಿಕ ಹುದ್ದೆಗಳನ್ನು ತುಂಬುವ ವಿಚಾರ ಸರ್ಕಾರದ ಮುಂದೆ ಇದೆಯೇ ;

(ಈ) ಈಗಾಗಲೇ ಇಂಥ ಸಂಸ್ಥೆಗಳಲ್ಲಿ ಹಲವಾರು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿರುವ ಪೌರ ಕಾರ್ಮಿಕರನ್ನು ಖಾಯಂಗೊಳಿಸುವ ವಿಚಾರ ಸರ್ಕಾರದ ಮುಂದೆ ಇದೆಯೇ ?

## ಹನಿ ನೀರಾವರಿ ಯೋಜನೆ

**ಶ್ರೀಮತಿ ವಿಮಲಾಗೌಡ (ವಿಧಾನಸಭೆಯಿಂದ ಚುನಾಯಿತರಾದವರು):–**

೯೮ (೨೯೮) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) 2013–14ನೇ ಸಾಲಿನಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಹನಿ ನೀರಾವರಿ ಯೋಜನೆಗೆ ನೀಡಿರುವ ಅನುದಾನ ಎಷ್ಟು ;

(ಆ) ಇದುವರೆವಿಗೂ ಯಾವ ಯಾವ ಜಿಲ್ಲೆಗಳಲ್ಲಿ ಸದರಿ ಯೋಜನೆಯನ್ನು ಅಳವಡಿಸಲಾಗಿದೆ ;

(ಇ) ಇದಕ್ಕೆ ನಿಗಧಿಪಡಿಸಿರುವ ಮೊತ್ತ ಎಷ್ಟು(ವಿವರ ನೀಡುವುದು) ?

## "ನಮ್ಮ ಗ್ರಾಮ ನಮ್ಮ ರಸ್ತೆ" ಯೋಜನೆ

**ಶ್ರೀಮತಿ ವಿಮಲಾಗೌಡ (ವಿಧಾನಸಭೆಯಿಂದ ಚುನಾಯಿತರಾದವರು):–**

೯೯ (೨೯೭) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯ ಸರ್ಕಾರ ನಮ್ಮ ಗ್ರಾಮ–ನಮ್ಮ ರಸ್ತೆ ಯೋಜನೆ ಪ್ರಾರಂಭ ಮಾಡಿರುವುದು ನಿಜವೇ ;

(ಆ) ಹಾಗಿದ್ದಲ್ಲಿ, ಇದುವರೆವಿಗೂ ಎಷ್ಟು ಗ್ರಾಮದ ರಸ್ತೆಗಳು ಸದರಿ ಯೋಜನೆಯಿಂದ ಪೂರ್ಣಗೊಂಡಿವೆ ;

(ಇ) ಇದುವರೆವಿಗೂ ಯಾವ ಯಾವ ಜಿಲ್ಲೆಗಳಲ್ಲಿ ಸದರಿ ಯೋಜನೆಯಿಂದ ಯಾವ ಯಾವ ರಸ್ತೆ ಕಾಮಗಾರಿಗಳನ್ನು ಹಮ್ಮಿಕೊಳ್ಳಲಾಗಿದೆ; ಎಷ್ಟು ಕಿ.ಮೀ ರಸ್ತೆ ಅಭಿವೃದ್ಧಿಪಡಿಸಲಾಗಿದೆ ಹಾಗೂ ವಾರ್ಷಿಕ ಗುರಿ ಎಷ್ಟು (ಸಂಪೂರ್ಣ ವಿವರ ನೀಡುವುದು) ?

## ಕಳಪೆ ಬಿತ್ತನೆ ಬೀಜ

**ಶ್ರೀಮತಿ ವಿಮಲಾಗೌಡ (ವಿಧಾನಸಭೆಯಿಂದ ಚುನಾಯಿತರಾದವರು):–**

೧೦೦ (೨೯೭) ಮಾನ್ಯ ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಕಳೆದ ಒಂದು ವರ್ಷದಿಂದ ಇಲ್ಲಿಯವರೆಗೆ ಕಳಪೆ ಬಿತ್ತನೆ ಬೀಜದಿಂದಾಗಿ ರಾಜ್ಯದ ರೈತರಿಗೆ ಆಗಿರುವ ನಷ್ಟದ ಪ್ರಮಾಣ ಎಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು) ;



(ಆ) ರೈತರಿಗೆ ಕಳಪೆ ಬೀಜದಿಂದ ಆಗಿರುವ ನಷ್ಟವನ್ನು ಸಂಬಂಧಪಟ್ಟ ಕಂಪನಿಗಳಿಂದ ಭರಿಸಲಾಗಿದೆಯೇ; ಅಥವಾ ಸರ್ಕಾರ ಈ ಬಗ್ಗೆ ನಷ್ಟ ಪರಿಹಾರ ನೀಡಿದೆಯೇ ;

(ಇ) ಕಳಪೆ ಬೀಜ ವಿತರಣೆ ಎಷ್ಟು ಕಾರಣಕ್ಕೆ ಕಂಪನಿಗಳ ವಿರುದ್ಧ ಸರ್ಕಾರ ಇದುವರೆವಿಗೂ ಯಾವ ಕ್ರಮ ಕೈಗೊಂಡಿದೆ (ವಿವರ ನೀಡುವುದು) ?

## ವಿದ್ಯುತ್ ಅಭಾವ ಉಂಟಾಗಿರುವ ಬಗ್ಗೆ

**ಶ್ರೀಮತಿ ವಿಮಲಾಗೌಡ (ವಿಧಾನಸಭೆಯಿಂದ ಚುನಾಯಿತರಾದವರು):–**

೧೦೧ (೨೯೫) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಬೇಸಿಗೆಗೆ ಮೊದಲೇ ವಿದ್ಯುತ್ ಅಭಾವ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಈ ರೀತಿಯ ವಿದ್ಯುತ್ ಅಭಾವ ಉಂಟಾಗಲು ಕಾರಣಗಳೇನು ;

(ಇ) ಹಾಗಿದ್ದರೆ, ಮುಂದಿನ ದಿನಗಳ ಬೇಸಿಗೆಯಲ್ಲಿ ವಿದ್ಯುತ್ ಕೊರತೆಯನ್ನು ನೀಗಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ;

(ಈ) ಪ್ರಸ್ತುತ ಬೆಂಗಳೂರು ಮತ್ತು ನಗರ ಪಟ್ಟಣಗಳಲ್ಲಿ ಉಂಟಾಗಿರುವ ವಿದ್ಯುತ್ ಅಭಾವ ಯಾವ ಪ್ರಮಾಣದಲ್ಲಿದೆ ?

## ಬಡ ನೇಕಾರರಿಗೆ ಉಚಿತ ವಿದ್ಯುತ್ ಸೌಲಭ್ಯ

**ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) :–**

೧೦೨(೩೦೩) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ವಿದ್ಯುತ್‌ಚಾಲಿತ ಮಗ್ಗ ಹೊಂದಿರುವ ನೇಕಾರರಿಗೆ ಸಬ್ಸಿಡಿ ದರದಲ್ಲಿ ವಿದ್ಯುತ್ ನೀಡುವ ಯೋಜನೆ ಎಂದಿನಿಂದ ಜಾರಿಗೆ ಬಂದಿದೆ ;

(ಆ) ಪ್ರಾರಂಭದಿಂದ ಇಂದಿನವರೆಗೆ ಯಾವ ಮಾನದಂಡದಲ್ಲಿ ವಿದ್ಯುತ್ ಪೂರೈಸಲಾಗುತ್ತಿದೆ ;

(ಇ) ವಿದ್ಯುತ್ ಮಗ್ಗಗಳಿಗೆ ನೀಡಿರುವಂತೆಯೇ, ಕೈಮಗ್ಗ ಬಡ ನೇಕಾರರಿಗೂ ಈ ಯೋಜನೆ ನೀಡದಿರಲು ಕಾರಣವೇನು ;

(ಈ) ರೈತರ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ಪೂರೈಸುವ ರೀತಿಯಲ್ಲಿ ಕೈಮಗ್ಗ ನೇಕಾರ ಹಾಗೂ ವಿದ್ಯುತ್ ಮಗ್ಗ ನೇಕಾರರಿಗೂ ಉಚಿತ ವಿದ್ಯುತ್ ನೀಡಲು ಮುಂಬರುವ ಆಯವ್ಯಯದಲ್ಲಿ ಕ್ರಮ ಕೈಗೊಳ್ಳಲು ಸರ್ಕಾರ ಮುಂದಾಗುವುದೇ ?

## ಕಳಪೆ ರಸ್ತೆಗಳ ಕಾಮಗಾರಿ

**ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) :–**

೧೦೩ (೩೦೦) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೨ ವರ್ಷಗಳಲ್ಲಿ ತುಮಕೂರು ಜಿಲ್ಲೆ ತುರುವೇಕೆರೆ ಕ್ಷೇತ್ರದ ಯಾವ ರಸ್ತೆಗಳ ದುರಸ್ತಿಗೆ ಹಣ ಬಿಡುಗಡೆಯಾಗಿದೆ (ಯೋಜನೆ ಹಾಗೂ ಯೋಜನೇತರ ವಿವರ ನೀಡುವುದು) ;

(ಆ) ಹಾಗಿದ್ದಲ್ಲಿ, ಯಾವಾಗ ಕಾಮಗಾರಿ ಕೈಗೆತ್ತಿಕೊಳ್ಳಲಾಯಿತು; ಯಾವ ಸಂಸ್ಥೆಯ ಮೂಲಕ ಕಾಮಗಾರಿ ನಿರ್ವಹಿಸಲಾಗಿದೆ ;

(ಇ) ಮಾಡಿರುವ ಕಾಮಗಾರಿ ಸಂಪೂರ್ಣ ಹಾಳಾಗಿ ಜನ ಸಾಮಾನ್ಯರು ತಿರುಗಾಡಲು ಯೋಗ್ಯವಲ್ಲದ ರೀತಿ ಕಳಪೆ ಮಟ್ಟದಲ್ಲಿ ನಿರ್ವಹಿಸಿರುವುದು ನಿಜವೇ ;

(ಈ) ಹಾಗಿದ್ದಲ್ಲಿ, ಈ ಕಾಮಗಾರಿಗಳನ್ನು ಪುನರ್‌ನಿರ್ವಹಿಸಲು ಆದೇಶ ಮಾಡಲಾಗುವುದೇ; ಕಳಪೆ ಕಾಮಗಾರಿಯ ಬಗ್ಗೆ ಆ ಸಂಸ್ಥೆಯ ಮೇಲೆ ತೆಗೆದುಕೊಂಡಿರುವ ಕ್ರಮಗಳೇನು ?



## ರಾಜ್ಯದಲ್ಲಿ ಉತ್ಪಾದನೆ ಆಗುತ್ತಿರುವ ವಿದ್ಯುತ್

**ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) :–**

೧೦೪ (೩೦೨) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಪ್ರತಿ ದಿವಸ ವಿವಿಧ ಮೂಲಗಳಿಂದ ಉತ್ಪಾದನೆಯಾಗುತ್ತಿರುವ ವಿದ್ಯುತ್ ಪ್ರಮಾಣ ಎಷ್ಟು (ವಿವರ ನೀಡುವುದು) ;

(ಆ) ದಿನವೊಂದಕ್ಕೆ ರಾಜ್ಯಕ್ಕೆ ಅಗತ್ಯವಿರುವ ವಿದ್ಯುತ್ ಪ್ರಮಾಣ ಎಷ್ಟು;

(ಇ) ಹಾಗಿದ್ದಲ್ಲಿ, ರಾಜ್ಯಕ್ಕೆ ಅಗತ್ಯವಿರುವಷ್ಟು ವಿದ್ಯುತ್ ಉತ್ಪಾದನೆ ಮಾಡಲು ಸರ್ಕಾರ ಹಮ್ಮಿಕೊಂಡಿರುವ ಕಾರ್ಯಕ್ರಮಗಳೇನು ;

(ಈ) ಎಷ್ಟು ದಿನಗಳಲ್ಲಿ ಈ ಕೊರತೆ ನಿವಾರಣೆ ಮಾಡಲಾಗುವುದು ?

## ಹೆಚ್ಚುವರಿಯಾಗಿ ಬಿಡುಗಡೆಯಾದ ಅನುದಾನ

**ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) :–**

೧೦೫ (೨೯೯) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೧೨–೧೩, ೨೦೧೩–೧೪ರ ಆಯವ್ಯಯದಲ್ಲಿ ಲೋಕೋಪಯೋಗಿ ಇಲಾಖೆಗೆ ನೀಡಿರುವ ಹಣ ಎಷ್ಟು (ಪ್ರತ್ಯೇಕ ವಿವರ ನೀಡುವುದು) ;

(ಆ) ಹಾಗಿದ್ದಲ್ಲಿ, ಕಳೆದ ೨ ವರ್ಷಗಳಲ್ಲಿ ಇಲಾಖೆಯಿಂದ ಕ್ಷೇತ್ರಾವಾರು ಎಷ್ಟೆಷ್ಟು ಹಣ ನಿಗಧಿ ಮಾಡಲಾಗಿದೆ (ಯೋಜನೆ ಹಾಗೂ ಯೋಜನೇತರ ಹಾಗೂ ಇತರ ಯೋಜನೆಗೆ ನೀಡಿರುವ ವಿವರ ನೀಡುವುದು) ;

(ಇ) ಆಯವ್ಯಯದಲ್ಲಿ ನೀಡಿರುವ ಹಣ ಹೊರತಾಗಿ, ಮುಖ್ಯಮಂತ್ರಿಗಳು ಹಾಗೂ ಮಂತ್ರಿಗಳ ವಿಶೇಷ ಅನುದಾನದಡಿ ಯಾವ್ಯಾವ ಕ್ಷೇತ್ರಕ್ಕೆ ಎಷ್ಟು ಹಣ ನೀಡಲಾಗಿದೆ (ಕಳೆದೆರೆಡು ವರ್ಷಗಳ ಕ್ಷೇತ್ರಾವಾರು ವಿವರ ನೀಡುವುದು) ;

(ಈ) ಹಲವಾರು ವರ್ಷಗಳಿಂದ ಲೋಕೋಪಯೋಗಿ ರಸ್ತೆಗಳು ಹಾಳಾಗಿದ್ದರೂ ಅವುಗಳನ್ನು ದುರಸ್ತಿಗೊಳಿಸದಿರಲು ಕಾರಣವೇನು ;

(ಉ) ವಿಶೇಷ ಅನುದಾನ ಮಂಜೂರಾತಿಗೆ ವಿಧಿಸುವ ಮಾನದಂಡವೇನು ?

## ನಂದಿಬೆಟ್ಟದಲ್ಲಿ ಇಲಾಖೆ ವ್ಯವಸ್ಥೆ ಬಗ್ಗೆ

**ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) :–**

೧೦೬ (೩೦೧) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ನಂದಿ ಬೆಟ್ಟದಲ್ಲಿ ಪ್ರವಾಸಿಗರಿಗೆ ಆಕರ್ಷಿತ ಸೌಲಭ್ಯಗಳನ್ನು ಒದಗಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಇತ್ತೀಚಿನ ದಿನಗಳಲ್ಲಿ ಸಮರ್ಪಕ ವ್ಯವಸ್ಥೆ ದೊರೆಯದ ಕಾರಣ ಪ್ರವಾಸಿಗರ ಸಂಖ್ಯೆ ಕಡಿಮೆಯಾಗಿರುವುದು ನಿಜವೇ ;

(ಇ) ಹಾಗಿದ್ದಲ್ಲಿ, ಸಮರ್ಪಕವಾಗಿ ಕೆಲಸ ನಿರ್ವಹಿಸಲು ಸೂಕ್ತ ಸಿಬ್ಬಂದಿ ಕೊರತೆ ಕಾರಣವೇ (ಪೂರ್ಣ ವಿವರ ನೀಡುವುದು) ;

(ಈ) ಕಳೆದ ಐದು ವರ್ಷಗಳಲ್ಲಿ ಈ ಎಲ್ಲಾ ವ್ಯವಸ್ಥೆಗೆ ನೀಡಲಾಗಿರುವ ಹಣವೆಷ್ಟು (ವಿವರ ನೀಡುವುದು) ?



## ಕೃಷ್ಣಾ ನದಿ ಮೇಲೆ ನಿರ್ಮಿಸುತ್ತಿರುವ ಜಂಬಗಿ ಸೇತುವೆ

**ಶ್ರೀ ಜಿ.ಎಸ್. ನ್ಯಾಮಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೦೭ (೩೦೪) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಜಂಬಗಿ ಗ್ರಾಮದ ಹತ್ತಿರ ನಿರ್ಮಾಣವಾಗುತ್ತಿರುವ (ಕೃಷ್ಣಾ ನದಿಗೆ ಅಡ್ಡಲಾಗಿ) ಸೇತುವೆ ಕೆಲಸ ವಿಳಂಬವಾಗುತ್ತಿರುವುದಕ್ಕೆ ಕಾರಣ ಏನು; ಅದರ ಅಂದಾಜು ವೆಚ್ಚ ಎಷ್ಟು, ಗುತ್ತಿಗೆದಾರರಿಗೆ ನೀಡಿರುವ ಕಾಲಾವಧಿ ಎಷ್ಟು ;

(ಆ) ಸದರಿ ಸೇತುವೆ ಮೂಲಕ ಹಾಯ್ದು ಜಮಖಂಡಿಯಿಂದ ಸಾವಳಗಿಗೆ ಹೋಗುವ ರಸ್ತೆಯನ್ನು ಅಭಿವೃದ್ಧಿಪಡಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ?

## ನೇಕಾರರಿಗೆ ನೀಡುತ್ತಿರುವ ಯಶಸ್ವಿನಿ ಯೋಜನೆ

**ಶ್ರೀ ಜಿ.ಎಸ್. ನ್ಯಾಮಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೦೮ (೩೦೬) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ನೇಕಾರರಿಗೆ ನೀಡುತ್ತಿರುವ ಯಶಸ್ವಿನಿ ಯೋಜನೆಯಡಿ ನಗರ ಪ್ರದೇಶದ ನೇಕಾರರಿಗೆ (ಪ್ರೀಮಿಯಮ್) ೭೫೦/– ರೂಪಾಯಿಗಳ ಕಂತನ್ನು ತುಂಬಬೇಕಾಗುತ್ತದೆ. ಆದರೆ ಗ್ರಾಮೀಣ ಪ್ರದೇಶದ ನೇಕಾರರಿಗೆ ೨೫೦/– ರೂಪಾಯಿಗಳ ಕಂತನ್ನು ಕಟ್ಟಬೇಕಾದ ತಾರತಮ್ಯವೇಕೆ ;

(ಆ) ರೈತರಿಗೆ ಇರುವಂತೆ ೨೫೦/– ರೂಪಾಯಿಗಳ ಒಂದೇ ಪ್ರಕಾರ ನೇಕಾರರಿಗೆ ಮಾಡಲು ಸಾಧ್ಯವಿಲ್ಲವೇ ?

## ಪುರಸಭೆ ಮತ್ತು ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿನ ಕಾಮಗಾರಿಗಳು

**ಶ್ರೀ ಮೃತ್ಯುಂಜಯ ಜಿನಗಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೦೯ (೩೧೪) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳು ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೩ ವರ್ಷಗಳಲ್ಲಿ ಬಳ್ಳಾರಿ ಜಿಲ್ಲೆಯಲ್ಲಿನ ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳಲ್ಲಿ ಯಾವ ಯಾವ ಬಾಬತ್ತಿನ ಅಡಿಗಳಲ್ಲಿ ಯಾವ ಯಾವ ಕಾಮಗಾರಿಗಳನ್ನು ಹಮ್ಮಿಕೊಳ್ಳಲಾಗಿತ್ತು ; ಕಾಮಗಾರಿಗಳವಾರು ವಿವರ, ಮಂಜೂರಾದ ಮೊತ್ತದ ವಿವರ ನೀಡುವುದು ;

(ಆ) ಈಗ ಈ ಕಾಮಗಾರಿಗಳು ಯಾವ ಹಂತದಲ್ಲಿವೆ; ಇವುಗಳಲ್ಲಿ ಎಷ್ಟು ಕಾಮಗಾರಿಗಳು ಅಪೂರ್ಣಗೊಂಡಿವೆ; ಅದಕ್ಕೆ ಕಾರಣಗಳೇನು ;

(ಇ) ಅಪೂರ್ಣಗೊಂಡ ಕಾಮಗಾರಿಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು ?

## ಕಳಪೆ ಬೀಜ ವಿತರಣೆ

**ಶ್ರೀ ಮೃತ್ಯುಂಜಯ ಜಿನಗಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೧೦ (೩೧೬) ಮಾನ್ಯ ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳಪೆ ಬೀಜ ವಿತರಣೆ ಮಾಡಿ, ರೈತರಿಗೆ ಅಪಾರ ಹಾನಿಯನ್ನುಂಟು ಮಾಡಿರುವ ಎಷ್ಟು ಪ್ರಕರಣಗಳು ಬಳ್ಳಾರಿ ಜಿಲ್ಲೆಯಲ್ಲಿ ಕಂಡುಬಂದಿವೆ ;

(ಆ) ಬಂದಿದ್ದಲ್ಲಿ, ಕಳಪೆ ಬೀಜ ವಿತರಣೆ ಮಾಡಿದವರ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು (ತಾಲ್ಲೂಕುವಾರು ವಿವರ ನೀಡುವುದು) ;



(ಇ) ಇಂತಹ ಪ್ರಕರಣಗಳು ಮರುಕಳಿಸದಂತೆ ಸರ್ಕಾರ ಯಾವ ರೀತಿಯ ಕಟ್ಟುನಿಟ್ಟಿನ ಕ್ರಮಕೈಗೊಳ್ಳುತ್ತದೆ ?

## ಪ್ರಸಕ್ತ ಸಾಲಿನಲ್ಲಿ ಹೊಸ ರಸ್ತೆಗಳ ನಿರ್ಮಾಣ

**ಶ್ರೀ ಮೃತ್ಯುಂಜಯ ಜಿನಗಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೧೧ (೩೧೫) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಈ ಆರ್ಥಿಕ ವರ್ಷದಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಹೊಸ ರಸ್ತೆ ನಿರ್ಮಾಣಕ್ಕೆ ಆದ್ಯತೆ ನೀಡಲಾಗಿದೆಯೇ ;

(ಆ) ಹಾಗಿದ್ದಲ್ಲಿ, ಯಾವ ಯಾವ ರಸ್ತೆಗಳನ್ನು ಹೊಸದಾಗಿ ನಿರ್ಮಿಸಲಾಗುತ್ತಿದೆ ;

(ಇ) ಈ ಹೊಸ ರಸ್ತೆಗಳ ನಿರ್ಮಾಣಕ್ಕೆ ಮಂಜೂರಾದ ಮೊತ್ತವೆಷ್ಟು; ಎಷ್ಟು ಬಿಡುಗಡೆಗೊಳಿಸಲಾಗಿದೆ ;

(ಈ) ಈಗ ಹೊಸ ರಸ್ತೆಗಳ ನಿರ್ಮಾಣ ಕಾಮಗಾರಿ ಯಾವ ಹಂತದಲ್ಲಿವೆ (ಕಾಮಗಾರಿವಾರು ವಿವರ ನೀಡುವುದು) ?

## ಶಾಲಾ ಕಟ್ಟಡಗಳ ಮೇಲೆ ಹಾದುಹೋದ ಹೈಟೆನ್ಷನ್ ವಿದ್ಯುತ್ ತಂತಿಗಳು

**ಶ್ರೀ ಮೃತ್ಯುಂಜಯ ಜಿನಗಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೧೨ (೩೧೩) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಳ್ಳಾರಿ ಜಿಲ್ಲೆಯಲ್ಲಿ ಹೆಚ್ಚಿನ ವಿದ್ಯುತ್ ಪ್ರವಾಹಕ (ಹೈಟೆನ್ಷನ್) ತಂತಿಗಳು, ಶಾಲಾ ಕಟ್ಟಡಗಳ ಮೇಲೆ ಹಾದು ಹೋಗಿರುವ ಸಂಗತಿ ಸರಕಾರ ಗಮನಿಸಿದೆಯೇ ;

(ಆ) ಗಮನಿಸಿದ್ದಲ್ಲಿ, ಜಿಲ್ಲೆಯಲ್ಲಿ ಎಷ್ಟು ಕಡೆ ಈ ರೀತಿ ಹೈಟೆನ್‌ಷನ್ ತಂತಿಗಳು ಹಾದು ಹೋಗಿವೆ, ಅವುಗಳು ಎಲ್ಲೆಲ್ಲಿ (ಶಾಲೆ, ಊರು, ತಾಲ್ಲೂಕುಗಳ ವಿವರ ನೀಡುವುದು) ;

(ಇ) ಈ ಹೈಟೆನ್‌ಷನ್ ತಂತಿಗಳಲ್ಲಿ ಹರಿಯುವ ವಿದ್ಯುತ್ ಪ್ರಮಾಣವೆಷ್ಟು (ಪ್ರತಿ ಮಾರ್ಗದ ವಿವರ ನೀಡುವುದು) ;

(ಈ) ಈ ಹೈಟೆನ್‌ಷನ್ ತಂತಿ ಹಾದು ಹೋಗುವ ಮಾರ್ಗದ ಸುತ್ತಮುತ್ತ ಎಷ್ಟು ಪ್ರದೇಶ ಖಾಲಿ ಇರಬೇಕು ಎನ್ನುವ ನಿಯಮವಿದೆಯೇ; ಹಾಗಿದ್ದಲ್ಲಿ ವಿವರ ನೀಡುವುದು ;

(ಉ) ಈ ಹೈಟೆನ್‌ಷನ್ ತಂತಿಗಳು ಹಾದು ಹೋಗುವ ಮಾರ್ಗದಲ್ಲಿ ಬರುವ ಶಾಲಾ ಕಟ್ಟಡಗಳ ಮೇಲಿನ ತಂತಿಗಳನ್ನು ಬದಲಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

## ಸ್ಥಳೀಯ ಸಂಸ್ಥೆಯ ಸ್ಥಾನಮಾನ

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) :–**

೧೧೩ (೩೧೮) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳು ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಹಾಲಿ ಈಗ ಎಷ್ಟು ಸ್ಥಳೀಯ ಸಂಸ್ಥೆಗಳಿವೆ; (ಜಿಲ್ಲಾವಾರು ಮಾಹಿತಿ ನೀಡುವುದು) ;

(ಆ) ಆಕ್ಟ್ರಾಯ್ ಶುಲ್ಕ ಅಂದರೆ ಏನು; ಇದನ್ನು ಯಾವಾಗ ಅಬಾಲಿಷ್ ಮಾಡಲಾಯಿತು; ಇದನ್ನು ಯಾವ ಸ್ಥಳೀಯ ಸಂಸ್ಥೆಗಳಿಂದ ವಸೂಲಿ ಮಾಡಲಾಗುತ್ತಿತ್ತು; ಆಕ್ಟ್ರಾಯ್ ಗ್ರಾಂಟ್‌ನ್ನು ಗ್ರಾಮೀಣ ಪ್ರದೇಶಕ್ಕೆ ನೀಡಬಹುದಿತ್ತೇ;



(ಇ) ರಾಜ್ಯದಲ್ಲಿ ಕರ್ನಾಟಕ ಪುರಸಭೆ ಅಧಿನಿಯಮ ೧೯೬೪ರ ಅನ್ವಯ ೧೯೮೫ಕ್ಕೆ ಎಷ್ಟು ಮುನಿಸಿಪಾಲಿಟಿ ಪ್ರದೇಶಗಳಿದ್ದವು; (ಜಿಲ್ಲಾವಾರು ಮಾಹಿತಿ ನೀಡುವುದು) ;

(ಈ) ಸರ್ಕಾರವು ದಿನಾಂಕ: ೧೭ ಜನವರಿ ೧೯೮೬ರಲ್ಲಿ ೨೨೭ ಮುನಿಸಿಪಾಲಿಟಿಗಳ ಪೈಕಿ ೭೧ ಮುನಿಸಿಪಾಲಿಟಿಗಳನ್ನು ಮಧ್ಯಂತರ ಮಂಡಲ್‌ಗಳನ್ನಾಗಿ ಪರಿವರ್ತಿಸಲಾಯಿತು, ಇದರಲ್ಲಿ ತಾಲ್ಲೂಕು ಕೇಂದ್ರ ಸ್ಥಾನ ಹೊಂದಿದ ಮಂಡಲ್‌ಗಳೆಷ್ಟು ಉಳಿದವೆಷ್ಟು (ಮಾಹಿತಿ ನೀಡುವುದು) ;

(ಉ) ಪರಿವರ್ತನೆಗೊಂಡ ೭೧ ಮುನಿಸಿಪಾಲಿಟಿಗಳ ಪೈಕಿ ಕರ್ನಾಟಕ ರಾಜ್ಯ ಪಂಚಾಯಿತಿ ಅಧಿನಿಯಮ ದಿನಾಂಕ: ೧೦–೦೫–೧೯೯೩ ರಂದು ಜಾರಿಗೆ ಬಂದ ನಂತರ ತಾಲ್ಲೂಕು ಕೇಂದ್ರ ಸ್ಥಾನ ಹೊಂದಿರದ ಮಂಡಲ್ ಪಂಚಾಯ್ತಿಗಳು ಗ್ರಾಮ ಪಂಚಾಯ್ತಿತಿಗಳಾಗಿ ಪರಿವರ್ತನೆಗೊಂಡವು. ಉಳಿದ ತಾಲ್ಲೂಕು ಕೇಂದ್ರ ಸ್ಥಾನ ಹೊಂದಿದ್ದ ಮಧ್ಯಂತರ ಮಂಡಲ್ ಪಂಚಾಯ್ತಿತಿಗಳು ಏನಾಗಿದ್ದವು (ಮಾಹಿತಿಯೊಂದಿಗೆ) ;

(ಊ) ಕಡತ/ಪತ್ರ ಸಂಖ್ಯೆ (ಡಿ.ಓ.ನಂ. ಹೆಚ್.ಯು.ಡಿ.೩೩೫ MNE ೯೪) ದಿನಾಂಕ: ೧೨–೦೭–೧೯೯೪ರ ಪತ್ರದಲ್ಲಿ ತಿಳಿಸಿರುವಂತೆ, ಯಾವ ಪ್ರದೇಶಗಳು ತಾಲ್ಲೂಕು ಕೇಂದ್ರಗಳಾಗಿದ್ದ ಮಧ್ಯಂತರ ಮಂಡಲ್ ಪಂಚಾಯ್ತಿತಿಗಳಾಗಿದ್ದು ಮತ್ತು ಜನಸಂಖ್ಯೆ ೧೦ ಸಾವಿರಕ್ಕಿಂತ ಹೆಚ್ಚಿಗೆ ಹೊಂದಿದ್ದಂತಹ ಪ್ರದೇಶಗಳನ್ನು ಅರ್ಬನ್ ಔಟ್ ಗ್ರೌತ್ (ಓ.ಜಿ.) ಎಂದು ವರ್ಗೀಕರಿಸಲಾಗಿದೆ; ವರ್ಗೀಕರಣಗೊಂಡ ಪ್ರದೇಶಗಳ ಪಟ್ಟಿ ಈ ಕಡತದ ಅನುಬಂಧ ೧ರಲ್ಲಿದ್ದು, ಇದರ ಪ್ರತಿ ಒದಗಿಸುವುದು ;

(ಋ) ಕರ್ನಾಟಕ ಮುನಿಸಿಪಾಲಿಟಿ ಅಧಿನಿಯಮ ೧೯೬೪ ಮತ್ತು ಪೌರನಿಗಮ ಅಧಿನಿಯಮ ೧೯೭೬ರ ಅನುಸಾರ ಅರ್ಬನ್

ಔಟ್ ಗ್ರೌತ್ (ಓ.ಜಿ.) ಪ್ರದೇಶ ಅಂದರೆ ನಗರ ಪ್ರದೇಶ, ಅರೆನಗರ ಪ್ರದೇಶ, ಗ್ರಾಮೀಣ ಪ್ರದೇಶ ಅಥವಾ ಯಾವ ಪ್ರದೇಶ (ವಿವರಗಳೊಂದಿಗೆ) ?

## ಉದ್ದಿಮೆಗಳ ಮಾಹಿತಿ ಕುರಿತು

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) :–**

೧೧೪ (೩೧೭) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಹಾಲಿ ಇರುವ ಸಾರ್ವಜನಿಕ ಉದ್ದಿಮೆಗಳೆಷ್ಟು; ಇವುಗಳನ್ನು ಯಾವ ಉದ್ದೇಶಕ್ಕಾಗಿ ಯಾವಾಗ ಸ್ಥಾಪನೆ ಮಾಡಲಾಯಿತು; ಅವುಗಳ ಕೇಂದ್ರ ಕಛೇರಿ ವಿಳಾಸ, ಸ್ಥಿರ ದೂರವಾಣಿ, ಅಂತರ್‌ಜಾಲ ವಿಳಾಸ ಒಳಗೊಂಡಂತೆ ಇಲಾಖಾವಾರು ಮಾಹಿತಿ ನೀಡುವುದು ;

(ಆ) ಸಾರ್ವಜನಿಕ ಉದ್ದಿಮೆಗಳ ಪೈಕಿ ಹಾಲಿ ಈಗ ಎಷ್ಟು ಲಾಭದಲ್ಲಿವೆ ಮತ್ತು ಎಷ್ಟು ನಷ್ಟದಲ್ಲಿವೆ (ವಿವರ ನೀಡುವುದು) ;

(ಇ) ದಿನಾಂಕ: ೩೦–೧೦–೨೦೧೪ರವರೆಗೆ ಒಟ್ಟು ಮುಚ್ಚಿರುವ ಸಾರ್ವಜನಿಕ ಉದ್ದಿಮೆಗಳೆಷ್ಟು; ಇವುಗಳನ್ನು ಯಾವಾಗ ಸ್ಥಾಪನೆ ಮಾಡಲಾಯಿತು; ಈ ಉದ್ದಿಮೆಗಳ ಉದ್ದೇಶವೇನು; ಯಾವ ಕಾರಣಕ್ಕಾಗಿ ಈ ಉದ್ದಿಮೆಗಳನ್ನು ಯಾವಾಗ ಮುಚ್ಚಲಾಯಿತು ;

(ಈ) ಸಾರ್ವಜನಿಕ ಉದ್ದಿಮೆಗಳಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅನುಮೋದನೆಯಾದ ಯಾವ ವೃಂದದ ಹುದ್ದೆಗಳು ಖಾಲಿ ಇವೆ (ವಿವರವಾಗಿ ಪ್ರತಿಯೊಂದು ಉದ್ದಿಮೆವಾರು ಮಾಹಿತಿ ನೀಡುವುದು) ;



(ಉ) ಸಾರ್ವಜನಿಕ ಉದ್ದಿಮೆಗಳಲ್ಲಿ ಅನುಕಂಪದ ಆಧಾರದ ಮೇಲೆ ಕೆಲಸ ಕೋರಿರುವ ಎಷ್ಟು ಅರ್ಜಿಗಳು ಇಲ್ಲಿಯವರೆಗೆ ಬಾಕಿ ಇವೆ (ಉದ್ದಿಮೆವಾರು ವಿವರ ನೀಡುವುದು) ;

(ಊ) ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಎರಡೂ ಸೇರಿ ಸ್ಥಾಪಿಸಿದ ಯಾವುದಾದರೂ ಜಂಟಿ ಉದ್ದಿಮೆ ಇವೆಯೇ; ಇದ್ದಲ್ಲಿ, ಜಂಟಿ ಉದ್ದಿಮೆಯ ಸ್ಥಾನಮಾನವೇನು; ಅಲ್ಲಿಯ ನೌಕರರ ಸ್ಥಿತಿಗತಿಗಳು ಮತ್ತು ನೌಕರರ ನೇಮಕಾತಿ ಹಾಗೂ ಸೇವಾ ನಿಯಮಗಳು ಯಾರ (ಕರ್ನಾಟಕ ಅಥವಾ ಭಾರತ ಸರ್ಕಾರದ) ಸೇವಾ ನಿಯಮಗಳನ್ನು ಅನುಸರಿಸಬೇಕು (ಪೂರ್ಣ ಮಾಹಿತಿಯೊಂದಿಗೆ) ?

## ಕೃಷಿ ವಿಜ್ಞಾನದ ಸಂಶೋಧನೆಗಳು

**ಶ್ರೀ ಎಂ. ಶ್ರೀನಿವಾಸ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೧೫ (೬೯) ಮಾನ್ಯ ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಕೃಷಿ ಭೂಮಿಯ ಅಂದಾಜು ವಿಸ್ತೀರ್ಣವೆಷ್ಟು; ನೀರಾವರಿ ಸೌಲಭ್ಯದ ಭೂಮಿಯೂ ಸೇರಿದಂತೆ ಪ್ರತ್ಯೇಕ ಮಾಹಿತಿ ಒದಗಿಸುವುದು ;

(ಆ) ಕಳೆದ ಐದು ವರ್ಷಗಳಲ್ಲಿ ಕೃಷಿ ವಿಜ್ಞಾನ ಸಂಶೋಧನೆಗಳ ಚಟುವಟಿಕೆಗಳಲ್ಲಿ ವಿಜ್ಞಾನಿಗಳೂ ಸೇರಿದಂತೆ ತೊಡಗಿಕೊಂಡಿರುವರ ಸಂಖ್ಯೆ ಎಷ್ಟು, ಯಾವ ರೂಪದ ಸಂಶೋಧನಾ ಚಟುವಟಿಕೆಗಳು ನಡೆಯುತ್ತಿವೆ; ಈ ಸಂಶೋಧನಾ ಚಟುವಟಿಕೆಗಳಿಗಾಗಿ ವಿನಿಯೋಗಿಸಲಾದ ಹಣವೆಷ್ಟು (ಪ್ರತ್ಯೇಕ ಮಾಹಿತಿ ಒದಗಿಸುವುದು) ;

(ಇ) ಇದುವರೆಗಿನ ಸಂಶೋಧನಾ ಪ್ರಗತಿ ಫಲಿತಾಂಶದ ಬಗ್ಗೆ ಸರ್ಕಾರವು ಗಮನಿಸಿದೆಯೇ; ಹಾಗಿದ್ದಲ್ಲಿ, ರೈತರಿಗೆ ತಮ್ಮ ಬೆಳೆಗಳಲ್ಲಿ ಪ್ರಗತಿ ಸಾಧಿಸುವ ನಿಟ್ಟಿನಲ್ಲಿ ಹೊಸ ಸಂಶೋಧನೆಯ ಫಲದ ಅರಿವನ್ನು ಮೂಡಿಸುವ ನಿಟ್ಟಿನಲ್ಲಿ ಸರ್ಕಾರವು ಕೈಗೊಂಡ ಕ್ರಮಗಳು ಏನು (ಮಾಹಿತಿ ಒದಗಿಸುವುದು) ?

## ಹಾಪ್‌ಕಾಮ್ಸ್‌ಗಳಲ್ಲಿ ದುಬಾರಿ ಬೆಲೆ, ತೂಕದಲ್ಲಿ ವ್ಯತ್ಯಾಸ

**ಶ್ರೀ ಎಂ. ಶ್ರೀನಿವಾಸ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೧೬ (೭೦) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರದಲ್ಲಿರುವ ಹಾಪ್‌ಕಾಮ್ಸ್‌ಗಳ ಸಂಖ್ಯೆ ಎಷ್ಟು, ಬಡಾವಣೆವಾರು ಪ್ರತ್ಯೇಕ ಮಾಹಿತಿ ಒದಗಿಸುವುದು ;

(ಆ) ಮಾರುಕಟ್ಟೆಯಲ್ಲಿ ದೊರಕುವ ತರಕಾರಿ ಮತ್ತು ಹಣ್ಣುಗಳ ಬೆಲೆಗಿಂತಲೂ ಹಾಪ್‌ಕಾಮ್ಸ್‌ನಲ್ಲಿನ ಬೆಲೆ ಹೆಚ್ಚಾಗಿರುವ ಅಂಶವನ್ನು ಸರ್ಕಾರವು ಗಮನಿಸಿದೆಯೇ ಹಾಗಿದ್ದಲ್ಲಿ ಇದಕ್ಕೆ ಕಾರಣವಾಗಿರುವ ಅಂಶಗಳು ಯಾವುದು (ಮಾಹಿತಿ ಒದಗಿಸುವುದು) ;

(ಇ) ಜನಸಾಮಾನ್ಯರಿಗೆ ನ್ಯಾಯಯುತ ಬೆಲೆ ಮತ್ತು ತೂಕದಲ್ಲಿ ಮೋಸವಾಗದಂತೆ ತಾಜಾ ತರಕಾರಿ ಮತ್ತು ಹಣ್ಣುಗಳನ್ನು ಒದಗಿಸುವ ಮತ್ತು ಹಾಪ್‌ಕಾಮ್ಸ್‌ಗಳನ್ನು ಮತ್ತಷ್ಟು ಜನಸ್ನೇಹಿಯಾಗಿಸುವ ನಿಟ್ಟಿನಲ್ಲಿ ಯಾವ ಕ್ರಮಗಳನ್ನು ಕೈಗೊಳ್ಳಲಾಗುವುದು (ಮಾಹಿತಿ ಒದಗಿಸುವುದು) ?



## ತಂಬಾಕು ಬೆಳೆ

**ಶ್ರೀ ಎಸ್.ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೧೧೭ (೧೮೪) ಮಾನ್ಯ ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ತಂಬಾಕು ಬೆಳೆಯನ್ನು ಯಾವ ಯಾವ ಜಿಲ್ಲೆಗಳಲ್ಲಿ ಬೆಳೆಯಲಾಗುತ್ತಿದೆ ಹಾಗೂ ಆ ಜಿಲ್ಲೆಗಳಲ್ಲಿ ಎಷ್ಟು ಹೆಕ್ಟೇರ್‌ಗಳಲ್ಲಿ ತಂಬಾಕು ಬೆಳೆಯಲಾಗುತ್ತಿದೆ (ವಿವರ ನೀಡುವುದು) ;

(ಆ) ವಿಶ್ವ ಆರೋಗ್ಯ ಸಂಸ್ಥೆಯ ವರದಿ ಆಧರಿಸಿ, ಭಾರತದಲ್ಲಿ ಪ್ರತಿ ವರ್ಷ ೧೦ ಲಕ್ಷ ಜನ ತಂಬಾಕು ಸೇವನೆಯಿಂದ ಮರಣ ಹೊಂದುತ್ತಿದ್ದು, ಈ ಸಂಖ್ಯೆ ಕರ್ನಾಟಕದಲ್ಲಿ ಎಷ್ಟಿದೆ ;

(ಇ) ಭಾರತ ತಂಬಾಕಿನಿಂದ ಬರುವ ರೋಗಗಳ ಚಿಕಿತ್ಸೆಗೆ ಸರಿ ಸುಮಾರು ೧ ಲಕ್ಷ ಕೋಟಿ ರೂಗಳನ್ನು ವ್ಯಯ ಮಾಡುತ್ತಿರುವ ಬಗ್ಗೆ ವರದಿಯಿದೆ. ಹಾಗಾದರೆ, ರಾಜ್ಯ ಸರ್ಕಾರ ಈ ಸಂಬಂಧಿಸಿದ ರೋಗಿಗಳ ಚಿಕಿತ್ಸೆಗೆ ಖರ್ಚು ಮಾಡುತ್ತಿರುವ ಹಣವೆಷ್ಟು; ಇದರಿಂದ ಆಗಿರುವ ಪ್ರಯೋಜನವೇನು (ವಿವರ ನೀಡುವುದು) ;

(ಈ) ಇಷ್ಟೆಲ್ಲಾ ಹಣವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಖರ್ಚು ಮಾಡುತ್ತಿದ್ದರೂ ಸಹ ತಂಬಾಕು ಸಂಬಂಧ ರೋಗಗಳನ್ನು ಶಾಶ್ವತವಾಗಿ ತಡೆಯಲು ಆಗದಿರುವುದರಿಂದ ತಂಬಾಕು ಬೆಳೆ ಹಾಗೂ ತಂಬಾಕು ಉತ್ಪನ್ನಗಳನ್ನು ಸಂಪೂರ್ಣ ಹಾಗೂ ಶಾಶ್ವತವಾಗಿ ನಿಷೇಧಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ?

## ಹೊಸಪೇಟೆಯಿಂದ ಚಿತ್ರದುರ್ಗ ರಾಷ್ಟ್ರೀಯ ಹೆದ್ದಾರಿ–೧೩

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೧೮ (೨೬೫) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹೊಸಪೇಟೆ–ಚಿತ್ರದುರ್ಗ ರಾಷ್ಟ್ರೀಯ ಹೆದ್ದಾರಿ–೧೩ ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಸದರಿ ರಸ್ತೆಯಲ್ಲಿ ನಿತ್ಯ ವಾಹನದ ಓಡಾಟದ ಪ್ರಮಾಣ ಎಷ್ಟಿದೆ;

(ಇ) ಸದರಿ ರಸ್ತೆಯನ್ನು ದುರಸ್ತಿಗೊಳಿಸುವ ಯೋಜನೆ ಸದ್ಯ ಯಾವ ಹಂತದಲ್ಲಿದೆ ;

(ಈ) ದುರಸ್ತಿಗಾಗಿ ಸರ್ಕಾರ ಬಿಡುಗಡೆ ಮಾಡಿದ ಅನುದಾನ ಎಷ್ಟು; ಮತ್ತು ಕಾಮಗಾರಿಯನ್ನು ಯಾವ ಏಜೆನ್ಸಿಗೆ ವಹಿಸಲಾಗಿದೆ ;

(ಉ) ಟೆಂಡರ್ ಪ್ರಕ್ರಿಯೆ ಮುಕ್ತಾಯಗೊಂಡಿದೆಯೇ; ಮುಕ್ತಾಯಗೊಂಡಿದ್ದಲ್ಲಿ, ಕಾಮಗಾರಿಯನ್ನು ಪ್ರಾರಂಭಿಸುವಲ್ಲಿ ಆಗುತ್ತಿರುವ ವಿಳಂಬಕ್ಕೆ ಕಾರಣಗಳೇನು ?

## ರಾಜ್ಯ ಹೆದ್ದಾರಿ ದುರಸ್ತಿ ಕಾಮಗಾರಿ

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೧೯ (೨೬೭) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಿಂಧನೂರು–ಕುಷ್ಟಗಿ ರಾಜ್ಯ ಹೆದ್ದಾರಿ ದುರಸ್ತಿ ಕಾಮಗಾರಿಯನ್ನು ಯಾವ ಗುತ್ತಿಗೆದಾರರಿಗೆ ನೀಡಲಾಗಿದೆ ;



(ಆ) ಸದರಿ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ನೀಡಿದ್ದು ಯಾವಾಗ ;

(ಇ) ಈ ಕಾಮಗಾರಿ ಮುಗಿಸಲು ಸರ್ಕಾರ ಗುತ್ತಿಗೆದಾರರಿಗೆ ನೀಡಿದ ಅವಧಿ ಎಷ್ಟು ;

(ಈ) ಈ ಕಾಮಗಾರಿಗೆ ಸರ್ಕಾರ ಬಿಡುಗಡೆ ಮಾಡಿದ ಅನುದಾನ ಎಷ್ಟು ;

(ಉ) ಸದ್ಯ ಕಾಮಗಾರಿ ಯಾವ ಹಂತದಲ್ಲಿದೆ; ಈ ಹಂತದ ಕಾಮಗಾರಿ ಯಾವ ದಿನಾಂಕಕ್ಕೆ ಲೋಕಾರ್ಪಣೆಗೊಳ್ಳುವುದು ?

## ತೋಟಗಾರಿಕೆಗೆ ಹಂಚಿಕೆಯಾದ ಅನುದಾನ

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೨೦ (೨೬೮) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೊಪ್ಪಳ ಜಿಲ್ಲೆಗೆ ೨೦೧೪–೧೫ನೇ ಸಾಲಿಗೆ ತೋಟಗಾರಿಕೆ ಇಲಾಖೆಗೆ ಹಂಚಿಕೆಯಾದ ಅನುದಾನವೆಷ್ಟು (ತಾಲ್ಲೂಕುವಾರು, ಲೆಕ್ಕ ಶೀರ್ಷಿಕೆವಾರು ವಿವರಗಳನ್ನು ನೀಡುವುದು) ;

(ಆ) ಹಂಚಿಕೆಯಾದ ಅನುದಾನದಲ್ಲಿ ಇಲ್ಲಿಯವರೆಗೆ ಬಳಕೆ ಮಾಡಿದ ಅನುದಾನದ ಬಗ್ಗೆ ಮಾಹಿತಿ ನೀಡುವುದು ;

(ಇ) ಜಿಲ್ಲೆಯಲ್ಲಿ ತೋಟಗಾರಿಕೆ ಇಲಾಖೆಯಿಂದ ಈ ವರ್ಷ ಸೌಲಭ್ಯವನ್ನು ಪಡೆದ ರೈತರ ಪೂರ್ಣ ವಿವರಗಳೇನು (ತಾಲ್ಲೂಕುವಾರು ಮಾಹಿತಿ ನೀಡುವುದು) ?

## ನಗರೋತ್ಥಾನ ಕಾರ್ಯಕ್ರಮ

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೨೧ (೨೬೬) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೊಪ್ಪಳ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ನಗರೋತ್ಥಾನ ಕಾರ್ಯಕ್ರಮ ಸದ್ಯ ಯಾವ ಹಂತದಲ್ಲಿದೆ ;

(ಆ) ಯಲಬುರ್ಗಾ ತಾಲ್ಲೂಕು ಪಟ್ಟಣ ಪಂಚಾಯತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ, ಖಾಲಿ ಇರುವ ಹುದ್ದೆಗಳು, ಮಂಜೂರಾದ ಹುದ್ದೆಗಳ ವಿವರಗಳನ್ನು ನೀಡುವುದು ;

(ಇ) ಯಲಬುರ್ಗಾ ತಾಲ್ಲೂಕು ಪಟ್ಟಣ ಪಂಚಾಯತಿಯಲ್ಲಿ ಜೂನಿಯರ್ ಇಂಜಿನಿಯರ್ ಸೇರಿದಂತೆ ವಿವಿಧ ಪ್ರಮುಖ ಹುದ್ದೆಗಳು ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಬಂದಿದ್ದಲ್ಲಿ, ಖಾಲಿ ಇರುವ ಹುದ್ದೆಗಳ ಭರ್ತಿಗಾಗಿ ಕೈಗೊಂಡ ಕ್ರಮಗಳೇನು ;

(ಉ) ಯಲಬುರ್ಗಾ ಪಟ್ಟಣ ಪಂಚಾಯತಿಯಲ್ಲಿ ನಗರೋತ್ಥಾನ ಯೋಜನೆ ಕುಂಠಿತಗೊಂಡಿರುವುದಕ್ಕೆ ಕಾರಣವೇನು ?

**ವಿ. ಶ್ರೀಶ್**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು–59/ಕಾ.ಸೂ. 03455/1500 ಪ್ರತಿಗಳು/3–12–2014